ವಿಜಯಪುರ | ಸಂಪುಟ 02 | ಸಂಚಿಕೆ 18 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಮಾರ್ಚ್ 06, 2024

“ಚುನಾವಣೆಯಲ್ಲಿ ಟಿಕೆಟ್ ನೀಡಲು ಕಾಂಗ್ರೆಸ್‌ನಲ್ಲಿ ಹಣ ಪಡೆಯುವ ಸಂಸ್ಕೃತಿ ಇದೆ. ಪಕ್ಷದ ಸದಸ್ಯತ್ವ ಪಡೆಯದವರನ್ನು ಮಂಡ್ಯ ಅಭ್ಯರ್ಥಿ ಮಾಡಲಾಗಿದೆ. ಮಂಡ್ಯ ಜನ ದಡ್ಡರಲ್ಲ, ದುಡ್ಡಿನಿಂದ ಮಂಡ್ಯ ಜನರನ್ನು ಕೊಂಡುಕೊಳ್ಳಲು ಆಗಲ್ಲ.”




– ಸುಮಲತಾ
ಮಂಡ್ಯ ಸಂಸದೆ

**2018ರ ಅಕ್ರಮ ಹಣ ವರ್ಗಾವಣೆ ಪ್ರಕರಣ | ಕರ್ನಾಟಕ ಹೈಕೋರ್ಟ್‌ನ ತೀರ್ಪು ರದ್ದು | ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ**

# ಡಿಕೆಶಿಗೆ ಬಿಗ್ ರಿಲೀಫ್: ಕೇಸ್ ವಜಾಗೊಳಿಸಿದ ಸುಪ್ರೀಂಕೋರ್ಟ್

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಬಿಗ್ ರಿಲೀಫ್ ನೀಡಿದ್ದು, 2018ರ ಅಕ್ರಮ ಹಣ ವರ್ಗಾವಣೆ ಪ್ರಕರಣವನ್ನು ವಜಾಗೊಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಅದೇಶವನ್ನೂ ಕೂಡ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ದಾಖಲಿಸಿದ್ದ 120 ಃ ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯ ರದ್ದುಗೊಳಿಸಿದೆ.

ಈ ಪ್ರಕರಣದಲ್ಲಿ ಡಿಕೆಶಿ ಪಿತೂರಿ ಆರೋಪ ಹೊರಿಸಿದ್ದ ಇಡಿ, ಪಿಎಂಎಲ್ ಕಾಯಿದೆಯ ಅಡಿ ಪ್ರಕರಣ ದಾಖಲಿಸಿತ್ತು. ಈ ಅಪರಾಧಗಳು ಆದಾಯ ತೆರಿಗೆ ಕಾಯಿದೆಯ ವೇಳಾಪಟ್ಟಿಯ ಭಾಗವಾಗಿರದ ಕಾರಣ ಹೈಕೋರ್ಟಿನ ತೀರ್ಪನ್ನು ರದ್ದುಗೊಳಿಸಲಾಗಿದೆ. ಕಃಐ ಕಾಯಿದೆಯ ಅಡಿಯಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ 2018ರಲ್ಲಿ ಡಿಕೆ ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಅಕ್ರಮ ಹಣ



ವರ್ಗಾವಣೆ ಪ್ರಕರಣವನ್ನು ರದ್ದುಗೊಳಿಸಿದೆ.

2017ರ ಆಗಸ್ಟ್‌ನಲ್ಲಿ ದಿಲ್ಲಿಯಲ್ಲಿರುವ ಅವರ ಫ್ಲಾಟ್‌ಗಳಲ್ಲಿ ಹಣ ಸಿಕ್ಕಿತ್ತು. ಈ ಹಿನ್ನೆಲೆ ಜಾರಿ ನಿರ್ದೇಶನಾಲಯ ಡಿಕೆ ಶಿವಕುಮಾರ್ ವಿರುದ್ಧ ಐಪಿಸಿ ಸೆಕ್ಷನ್ 120 ಃ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿತ್ತು. ಈ ಪ್ರಕರಣದಲ್ಲಿ 2019ರಲ್ಲಿ ಶಿವಕುಮಾರ್ ಸುಮಾರು ಮೂರು ತಿಂಗಳ ಕಾಲ ಜೈಲುಪಾಲಾಗಿದ್ದರು. ದೆಹಲಿ ಹೈಕೋರ್ಟ್ ಬಳಿಕ ಅವರಿಗೆ ಜಾಮೀನು ನೀಡಿತ್ತು. ಶಿವಕುಮಾರ್ ಅವರು ತನ್ನ ಬಂಧನವನ್ನು ಬಿಜೆಪಿ ರಾಜಕೀಯ ಸೇಡಿನ ಭಾಗ ಎಂದು ಆರೋಪಿಸಿದ್ದರು ಮತ್ತು ನ್ಯಾಯಾಂಗದ ಮೇಲೆ ನನಗೆ ಸಂಪೂರ್ಣ ನಂಬಿಕೆಯಿದೆ ಎಂದು ಹೇಳಿದ್ದರು.

ಈ ಮೊದಲು ಇಡಿ ಸಮನ್ಸ್‌ನ್ನು ರದ್ದುಪಡಿಸಲು ಡಿಕೆಶಿ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ಇಡಿ ಸಮನ್ಸ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿತ್ತು. ಹೈಕೋರ್ಟ್‌ನ ನಿರ್ಧಾರ ಪ್ರಶ್ನಿಸಿ ಡಿಕೆ ಶಿವಕುಮಾರ್ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್ ಈಗ ಪ್ರಕರಣವನ್ನು ರದ್ದುಗೊಳಿಸಲು ಆದೇಶಿಸಿದೆ. ಆದರೆ ಜಾರಿ ನಿರ್ದೇಶನಾಲಯ ಸುಪ್ರೀಂಕೋರ್ಟ್‌ನಲ್ಲಿ ಆದೇಶವನ್ನು ಮರುಪರಿಶೀಲಿಸಲು ಮನವಿ ಮಾಡಿದೆ.

## ರಾಜ ನುಡಿ


ದೇವರು ಮಂದಿರಕ್ಕಿಂತ, ಮನುಷ್ಯನ ಹೃದಯ ಮಂದಿರವನ್ನು ಇಷ್ಟ ಪಡುತ್ತಾನಂತೆ. ಏಕೆಂದರೆ ಮಂದಿರದಲ್ಲಿ ಮನುಷ್ಯನ ಆಟ ನಡೆಯುತ್ತದೆ. ಹೃದಯದಲ್ಲಿ ಕೇವಲ ದೇವರದ್ದು ಮಾತ್ರ ನಡೆಯುತ್ತದೆ. ಹೀಗಾಗಿ ಹೃದಯದಲ್ಲಿ ಪ್ರೀತಿಯ ಹೊರತು ಏನನ್ನೂ ಇಟ್ಟುಕೊಳ್ಳಬೇಡಿ

–ಡಾ. ರಾಜಶೇಖರ ನಾಗೂರ

## ಪುರಸಭೆ ಅವ್ಯವಸ್ಥೆ ಕಂಡು ಲೋಕಾಯುಕ್ತ ಎಸ್ಪಿ ಗರಂ!

ಉದಯರಶ್ಮಿ ನ್ಯೂಸ್

ಸಿಂದಗಿ: ಜಿಲ್ಲೆಯಾದ್ಯಂತ ಎಲ್ಲ ಸರಕಾರಿ ಕಛೇರಿಗಳಲ್ಲಿ ಕೆಲಸ ಕಾರ್ಯಗಳ ಬಗ್ಗೆ ನಿಗಾ ಇಡಬೇಕೆಂದು ಆದೇಶವಿದ್ದ ಕಾರಣ ಇಂದು ಸಿಂದಗಿ ಪುರಸಭೆ ಕಾರ್ಯಾಲಯ ಮೇಲೆ ದಾಳಿ ಮಾಡಿದ್ದೇವೆ ಎಂದು ಲೋಕಾಯುಕ್ತ ಎಸ್ಪಿ ಟಿ.ಮಲ್ಲೇಶ ಹೇಳಿದರು.



ಪಟ್ಟಣದ ಪುರಸಭೆ ಕಾರ್ಯಾಲಯಕ್ಕೆ ಏಕಾಏಕಿ ದಾಳಿ ಮಾಡಿದ ಲೋಕಾಯುಕ್ತರು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿಂದಗಿ ಪುರಸಭೆಯಲ್ಲಿ ಲೋಪದೋಷಗಳು ಹೆಚ್ಚಾಗಿವೆ ಎಂದು ನಮಗೆ ದೂರುಗಳು ಬಂದಿದ್ದವು. ದೂರುಗಳ ಆಧಾರದ ಮೇಲೆ ದಾಳಿ ನಡೆಸಿದಾಗ ಇಲ್ಲಿನ ವಾತಾವರಣ ಹದಗೆಟ್ಟಿದೆ. ಜನನ ಮತ್ತು ಮರಣ ದಾಖಲಾತಿ ನೀಡಿವುದು ತಡ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರಿಂದ ದೂರು ಬಂದಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಪುರಸಭೆಯಲ್ಲಿ ಸ್ವಚ್ಚತೆ ಎಂಬುದು ಮರೀಚಿಕೆಯಾಗಿದೆ. ಸಾರ್ವಜನಿಕರಿಗೆ ಸರಕಾರ ಸವಲತ್ತುಗಳು ಒದಗಿಸಬೇಕು ಮತ್ತು ಅವರಿಗೆ ಅನುಕೂಲ ಮಾಡಬೇಕು. ಆಡಳಿತ ಚುರುಕುಗೊಳಿಸುವ ನಿಟ್ಟಿನಲ್ಲಿ ನಾವು ದಾಳಿ ಮಾಡಿದ್ದೇವೆ ಎಂದರು.

ಸಿಬ್ಬಂದಿಗೆ ತರಾಟೆ ಊರಿನ ಶುಚಿತ್ವ ಕಾಪಾಡಬೇಕಾದ ಪುರಸಭೆಯೇ ಮೊದಲು ಶುಚಿತ್ವದಿಂದ ಕೂಡಿಲ್ಲವೆಂದರೆ ಊರನ್ನು ಹೇಗೆ ಸ್ವಚ್ಛವಾಗಿ ಇಡುತ್ತಿರಿ? ನಿಮ್ಮ ಮನೆಯನ್ನು ಹೀಗೆ ಇಟ್ಟುಕೊಳ್ಳುತ್ತೀರಾ ಎಂದು ಪುರಸಭೆ ಮುಖ್ಯ ಅಧೀಕ್ಷಕರಿಗೆ ತರಾಟೆಗೆ ತೆಗೆದುಕೊಂಡರು.

ಅಧಿಕಾರಿಗಳು ಯಾವ ಸಮಯಕ್ಕೆ ಕಛೇರಿಗೆ ಬರುತ್ತಾರೆ ಎಂದು ನೋಟಿಸ್ ಬೋರ್ಡಗೆ ಹಾಕಿ ಸಿಬ್ಬಂದಿಗಳಿಗೆ ಸೂಚಿಸಿದರು.

ಪುರಸಭೆಯ ಅವ್ಯವಸ್ಥೆಯನ್ನು ಕಂಡು ಲೋಕಾಯುಕ್ತರು ಗರಂ ಆದರು.

ಇದೇ ಸಂದರ್ಭದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಸುರೇಶರೆಡ್ಡಿ ಎಂ.ಎಸ್, ಆನಂದ ಡೋಣಿ, ಪಿಎಸ್‌ಐ ಆನಂದ ಠಕಳೆ ಇದ್ದರು.

**ಫಲಾನುಭವಿಗಳ ಪಟ್ಟಿ ರದ್ದು ಪಡಿಸಿದ್ದಕ್ಕೆ ಶಾಸಕ ಮನಗೂಳಿ ವಿರುದ್ದ ಬಿಜೆಪಿ ಬೃಹತ್ ಪ್ರತಿಭಟನೆ**

## ದ್ವೇಷ ರಾಜಕಾರಣ ಮುಂದುವರೆದರೆ ಉಗ್ರ ಹೋರಾಟ :ಭೂಸನೂರ

ಉದಯರಶ್ಮಿ ನ್ಯೂಸ್

ಸಿಂದಗಿ: ಎಸ್.ಸಿ.ಪಿ.ಟಿ ಮತ್ತು ಟಿ.ಎಸ್.ಪಿ ಅನುದಾನದ ಕ್ರಿಯಾಯೋಜನೆಯಲ್ಲಿ ರೂ.5ಕೋಟಿ ಅನುದಾನ ಬಿಡುಗಡೆಗೊಳಿಸಿ 69 ಪಲಾನುಭವಿಗಳಿಗೆ ಟೆಂಡರ್ ಕರೆಯಲಾಗಿತ್ತು. ಆದರೆ ನನ್ನ ಅವಧಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಹೆಸರನ್ನು ಬದಲಾಯಿಸಿ ಬೇರೆ ಹೆಸರುಗಳನ್ನು ಸೇರಿಸುವಂತೆ ಈಗಿನ ಶಾಸಕರು ಸಚಿವರಿಗೆ ಪತ್ರ ಬರೆದಿರುವುದು ಖಂಡಿಸುತ್ತೇವೆ ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಾಜಿ ಶಾಸಕ ರಮೇಶ ಭೂಸನೂರ ಹೇಳಿದರು.




ತಾಲೂಕಿನ ರಾಂಪೂರ ಪಿಎ ಗ್ರಾಮದ ಅಂಬೇಡ್ಕರ್ ವೃತ್ತದಿಂದ ಕೆಬಿಜೆಎನ್‌ಎಲ್ ಕಾರ್ಯಾಲಯದವರೆಗೆ ಬಿಜೆಪಿ ಮಂಡಲದ ವತಿಯಿಂದ ಹಮ್ಮಿಕೊಂಡ 2022–23ನೆಯ ಸಾಲಿನ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಅರ್ಹ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳ ಪಟ್ಟಿ ರದ್ದು ಪಡಿಸಿರುವ ಸ್ಥಳೀಯ ಶಾಸಕರ ವಿರುದ್ಧ ಬೃಹತ್ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು, ನನ್ನ ಅವಧಿಯಲ್ಲಿನ ಫಲಾನುಭವಿಗಳ ಪಟ್ಟಿಯನ್ನು ರದ್ದು ಪಡಿಸುವಂತೆ ಪತ್ರ ಬರೆದು ದೀನ

“ಚಟ್ಟರಕಿ ಗ್ರಾಪಂನ ಆಶ್ರಯ ಮನೆಗಳನ್ನು ಹೊನ್ನಳ್ಳಿ ಗ್ರಾಪಂಗೆ ವರ್ಗಾವಣೆ ಮಾಡಿದ್ದೀರಿ ಏಕೆ? ಅವರು ನಿಮ್ಮ ಜನಾಂಗದವರಂತೋ? ಅಥವಾ ಬೀಗರಂತೋ? ವರ್ಗಾವಣೆ ಹೇಗೆ ಮಾಡಿದ್ದೀರಿ? ಚಟ್ಟರಕಿ ಗ್ರಾಮದಲ್ಲಿರುವವರು ಫಲಾನುಭವಿಗಳು ಅಲ್ಲವೇ?”

**– ರಮೇಶ ಭೂಸನೂರ, ಮಾಜಿ ಶಾಸಕರು, ಸಿಂದಗಿ**

4ನೇ ಪುಟಕ್ಕೆ



## ವಚನ ಚಿಂತನ 316

*ಎಲ್ಲರಲ್ಲಿಹ ಅರಿವನು ಆರೂ ಅರಿಯರು*

*ಆವುದೊಂದು ರೂಪನು ಕಂಗಳು ಕಾಣವು.*
*ಆವುದೊಂದು ಶಬ್ದವ ಕಿವಿಗಳು ಕೇಳವು.*
*ಆವುದೊಂದು ಪರಿಣಾಮವ ಮನವರಿಯದು.*
*ಆವುದೊಂದು ರುಚಿಯ ಜಿಹ್ವೆಯರಿಯದು.*
*ಆವುದೊಂದು ಪರಿಮಳವ ನಾಶಿಕವರಿಯದು.*
*ಆವುದೊಂದು ಸ್ಪರ್ಶನವ ತ್ವಕ್ಕರಿಯದು.*
*ಎಲ್ಲರಲ್ಲಿಯ ಅರಿವ ಮಹಾಘನ ನಿರಾಳ ನಿರಂಜನ ನಿರಾಮಯ*
*ನಿರಾಮಯಾತೀತವ ಆರೂ ಅರಿಯರು*
*ಅಪ್ರಮಾಣಕೂಡಲಸಂಗಮದೇವಾ.*

*– ಬಾಲಸಂಗಯ್ಯನವರು*

ಈ ವಚನದಲ್ಲಿ ಬಾಲಸಂಗಯ್ಯನವರು ದೇವರ ಇರುವಿಕೆ ಮತ್ತು ಅರಿಯುವಿಕೆ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ನಮ್ಮ ಪಂಚೇಂದ್ರಿಯಗಳಿಗೆ ಅತೀತವಾದ ಶಕ್ತಿಸ್ವರೂಪ ಮಹಾಲಿಂಗವನ್ನು ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ನಾವು ಕಾಣುತ್ತೇವೆ. ನಮ್ಮ ಕಣ್ಣುಗಳು ರೂಪವನ್ನು ಮಾತ್ರ ಗ್ರಹಿಸಬಲ್ಲ ಆದರೆ ದೇವರು ರೂಪ ರಹಿತನು, ನಮ್ಮ ಕಿವಿಗಳಿಗೆ ಶಬ್ದವನ್ನು ಕೇಳುವ ಮಿತಿ ಉಂಟು (ಮಾನವ ಕಿವಿ 20 ಊದ (ಕಡಿಮೆ ಪಿಚ್) ನಿಂದ 20 ಇಊದ (ಅತ್ಯಧಿಕ ಪಿಚ್) ನಡುವಿನ ಆವರ್ತನಗಳನ್ನು ಮಾತ್ರ ಗ್ರಹಿಸುತ್ತದೆ. 20 ಊದ ಗಿಂತ ಕಡಿಮೆ ಇರುವ ಎಲ್ಲಾ ಶಬ್ದಗಳು ಇನ್ಫ್ರಾಸೌಂಡ್‌ಗಳೆಂದು ಮತ್ತು, 20 ಕಿಲೋಹರ್ಟ್ಸ್‌ಗಿಂತ ಹೆಚ್ಚಿನ ಎಲ್ಲಾ ಶಬ್ದಗಳನ್ನು ಅಲ್ಟ್ರಾಸೌಂಡ್‌ಗಳೆಂದು ಕರೆಯಲಾಗುತ್ತದೆ. ಇವುಗಳನ್ನು ನಮ್ಮ ಕಿವಿ ಗುರ್ತಿಸುವುದಿಲ್ಲ), ಆದರೆ ದೇವರ ಇರುವಿಕೆಯನ್ನು ನಾದಸ್ವರೂಪದ ಉದ್ಗೀತದಲ್ಲಿ ಶರಣರು ಗುರ್ತಿಸಿದ್ದಾರೆ. ಹಾಗೆಯೇ ಪರಿಣಾಮತೀತನಾಗಿ ದೇವನಿರುವ ಕಾರಣ ಮನಕ್ಕೆ ವಶವಾಗದು. ನಮ್ಮ ನಾಸಿಕವು ಸುಮಾರು ಒಂದು ಟ್ರಿಲಿಯನ್ ಪರಿಮಳವನ್ನು ಗುರುತಿಸುವ ಸಾಮರ್ಥ್ಯ ಹೊಂದಿದೆ ಎಂದು ಇತ್ತೀಚಿನ ಸಂಶೋಧನೆ ಹೇಳುತ್ತಿದೆ. (The human nose can distinguish at least 1 trillion different odours, a resolution orders of magnitude beyond the previous estimate of just 10,000 scents, researchers report today in Science.) ಆದರೆ ದೇವರ ಇರುವಿಕೆಯ ವಾಸನೆಯನ್ನು ನಮ್ಮ ನಾಸಿಕವು ಗುರುತಿಸದು ಸ್ಪರ್ಶಕ್ಕೂ ಸಿಗದ ನಿರಾಳ ನಿರಂಜನ ದೇವರನ್ನು ಅನುಭಾವದಿಂದ ಮಾತ್ರ ಅರಿಯಲು ಸಾಧ್ಯವೆಂದಿದ್ದಾರೆ.

**ಬೊಮ್ಮನಜೋಗಿ ಗ್ರಾಮದ ಸಾಮಾಜಿಕ ಕಳಕಳಿಯ ರಾಮನಗೌಡ ಕನ್ನೊಳ್ಳಿ ಯ ಗ್ರಾಮ ಸೇವೆ**

# ಮಂದಿರ ಮಸೀದಿ ಕಟ್ಟುವವರ ಮಧ್ಯೆ ಶೌಚಾಲಯ ಕಟ್ಟಿದವರು!

ಉದಯರಶ್ಮಿ ನ್ಯೂಸ್

–ಸಾಯಬಣ್ಣ ಮಾದರ (ಸಲಾದಹಳ್ಳಿ)

ವಿಜಯಪುರ: ಅದೊಂದು ಕುಗ್ರಾಮ. ಆ ಊರಿಗೆ ಬಸ್ಸಿನ ಸೌಕರ್ಯ ಇರುವುದಿಲ್ಲ. ರಸ್ತೆಯಂತೂ ನೋಡುತೀರದು, ಅಕ್ಷರಸ್ಥರು ಅಲ್ಲಿ ಕಂಡರೂ ಮೂಢನಂಬಿಕೆಯೆಂಬ ಅಂಧಕಾರವನ್ನು ಹೊದ್ದು ಮಲಗಿದ ಊರದು.




ಆ ಗ್ರಾಮದಲ್ಲಿ ಮಹಿಳೆಯರಿಗೆ ಬಹಿರ್ದೆಸೆಗೆ ಹೋಗುವುದು ಒಂದು ಸಾಹಸದ ಕೆಲಸ. ಅವರು ಬಹಿರ್ದೆಸೆಗೆ ಕುಳಿತುಕೊಳ್ಳುವುದು ರೋಡಿನ ಪಕ್ಕದಲ್ಲಿಯೋ, ಕಾಲುದಾರಿಗಳ ಪಕ್ಕದಲ್ಲಿಯೋ ಕುಳಿತುಕೊಳ್ಳಬೇಕಾಗಿತ್ತು. ದಾರಿ ಹೋಕರು ಬರುವುದು ಕಂಡರೆ ಅವರು ಎದ್ದು ನಿಲ್ಲುವುದು ಸಾಮಾನ್ಯವಾಗಿತ್ತು. ಅವರು ಬಹಿರ್ದೆಸೆ ಮುಗಿಸುವಷ್ಟರಲ್ಲಿ ಹಲವು ಬಾರಿ ಎದ್ದು ಕುಳಿತುಕೊಳ್ಳಬೇಕಾಗಿತ್ತು. ಮಳೆಗಾಲದಲ್ಲಿ ಅಂತೂ ಹೇಳತೀರದ ಕಷ್ಟ. ರಾಡಿ ಗಲೀಜು ತುಂಬಿದ ರಸ್ತೆಗಳು, ಒಂದು ಕಾಲು ಎತ್ತಿ ಇಡಬೇಕೆಂದರೂ ಅಲ್ಲಿ ಬೆಂಕಿ ಕೆಂಡದಂತ ಹೊಲಸು. ಬಾಣಂತಿಯರು, ವೃದ್ಧರು ಅಂಗವಿಕಲರಿಗೆ ದೊಡ್ಡದೊಂದು ವ್ಯಥೆ. ಇಂತಹ ರಾಜ್ಯದ ಹಲವು ಹಳ್ಳಿಗಳಲ್ಲಿ ಇದು ಒಂದು ದೇವರ ಹಿಪ್ಪರಗಿ ತಾಲೂಕಿನ ಬೊಮ್ಮನಜೋಗಿ.

ಇದನ್ನೆಲ್ಲಾ ಕಣ್ಣಾರೆ ನೋಡಿದ ಅದೇ ಗ್ರಾಮದ ರಾಮನಗೌಡ ಕನ್ನೊಳ್ಳಿ ಎಂಬ ಅಧಿಕಾರಿಯು ತಾನು ಹುಟ್ಟಿ ಬೆಳೆದ ಆ ಊರಿನಲ್ಲಿ ತನ್ನ ತಾಯಿ ತಂಗಿಯಂತಹ ಹಲವಾರು ಮಹಿಳೆಯರ ಕಷ್ಟ ನೋಡಿ ಮರುಗಿದರು. ಇದಕ್ಕೆ ಒಂದು ಪರಿಹಾರ ಮಾಡಬೇಕೆಂದು ನಿರ್ಧರಿಸಿದರು. ಇವರು ಇರುವುದು ಕೆಲಸ ಮಾಡುವುದು ಬೆಂಗಳೂರಿನಲ್ಲಿ. ತಾನು ಇಲ್ಲಿಯ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂದು ವಿಚಾರ ಮಾಡಿ, ಗ್ರಾಮ ಪಂಚಾಯಿತಿಗಳಿಗೆ ಸಂಪರ್ಕಿಸಿದರು. ಅಲ್ಲಿ ಹಾರಿಕೆಯ ಉತ್ತರ ಬಂತು. ಜನಪ್ರತಿನಿಧಿಗಳನ್ನು ಕೇಳಿ ನೋಡಿದರೆ ಈ ಊರು ಉಸಾಬರಿ ನಿಮಗೇಕೆ ಎಂಬುವಂತೆ ಇವರನ್ನು ನೋಡಿದರು.



ನಂತರ ಊರಿನ ಕೆಲವು ಗಣ್ಯರನ್ನು ವಿಚಾರಿಸಿದಾಗ ಮಂದಿರ ಮಸೀದಿಯಾದರೂ ಕಟ್ಟಬಹುದು, ಇದು ಎಂತದು ಶೌಚಾಲಯ ಕಟ್ಟಿಸುವುದು ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಇದು ಹೀಗೆ ಆದರೆ ಆಗದ ಕೆಲಸವಲ್ಲ ಎಂದು ತಾವೇ ಸ್ವತಃ ಮಹಿಳಾ ಶೌಚಾಲಯವನ್ನು ಕಟ್ಟಿಸಲು ರಾಮನಗೌಡ ಸಿದ್ಧರಾದರು.

“ ಪ್ರತಿ ಗ್ರಾಮದಲ್ಲಿ ನಾವು ದೇವಾಲಯಕ್ಕೆ ನೀಡುವ ಪ್ರಾಮುಖ್ಯತೆಯನ್ನು ಶೌಚಾಲಯಕ್ಕೂ ನೀಡಬೇಕು. ದೇವಾಲಯ ಮಾನಸಿಕ ಸ್ವಾಸ್ಥ್ಯ ಕಾಪಾಡಿದರೆ ಶೌಚಾಲಯ ದೈಹಿಕ ಕ್ಷಮತೆಗೆ ಕಾರಣವಾಗಿದೆ. ನಮ್ಮ ಗ್ರಾಮಗಳಲ್ಲಿ ಇಂದಿಗೂ ಶೌಚದ ಕುರಿತು ನಾಚಿಕೆ ಹಾಗೂ ನಿರ್ಲಕ್ಷ್ಯ ಭಾವವಿದೆ. ಇದು ಮಹಿಳೆಯರ ಮೇಲೆ ಹೆಚ್ಚಿನ ಪರಿಣಾಮ ಬೀರುವಂತಾಗಿದೆ.”

**– ಸುನಂದಾ ತೋಳಬಂದಿ , ಉಜ್ವಲ ಸಂಸ್ಥೆಯ ಯೋಜನಾ ಸಂಯೋಜಕಿ**

“ಗ್ರಾಮಸ್ಥರ ಸಹಕಾರದಿಂದ 27 ಲಕ್ಷ ರೂ.ಗಳ ವೆಚ್ಚದಲ್ಲಿ 11 ಭಾರತೀಯ ಮಾದರಿ 02 ಕಮೋಡ್ ಸಹಿತ ಒಟ್ಟು 13 ಶೌಚಾಲಯಗಳು. ಮತ್ತು ಇವುಗಳಿಗೆ ನೀರು ಪೂರೈಸುವ 2 ಸಿಂಟೆಕ್ಸ್ ಸೇರಿದಂತೆ 2 ತಿಂಗಳುಗಳವರೆಗೆ ಸ್ವಚ್ಛತೆಗಾಗಿ ಹಾರ್ಪಿಕ್‌ಗಳನ್ನು ಒದಗಿಸಲಾಗಿದೆ. ಇನ್ನು ಸ್ವಚ್ಛತೆ ಕಾಪಾಡುವುದು ಗ್ರಾಮಸ್ಥರ ಜವಾಬ್ದಾರಿಯಾಗಿದೆ.”

– ರಾಮನಗೌಡ ಕನ್ನೊಳ್ಳಿ, ಹೈಟೆಕ್ ಮಹಿಳಾ ಶೌಚಾಲಯಗಳ ರೂವಾರಿ

ಹಲವರು ನಮ್ಮ ಊರಿನಲ್ಲಿ ನೌಕರಸ್ಥರು, ರಾಜಕಾರಣಿಗಳಿದ್ದಾರೆ, ಶ್ರೀಮಂತರು ಇದ್ದಾರೆ. ಆದರೆ ಇಂತಹ ಶೌಚಾಲಯದ ಕೆಲಸ ಈ ಅಧಿಕಾರಿಗೆ ಏತಕ್ಕೆ ಬೇಕು ಎಂದು ಕೆಲ ಗ್ರಾಮಸ್ಥರು ಮೂಗು ಮುರಿದರು. ಆದರೆ ರಾಮನಗೌಡ ಕನ್ನೊಳ್ಳಿಯವರು ತಾವು ನಿರ್ಧರಿಸಿದಂತೆ ಊರಿಗೆ ಇಂಜಿನಿಯರಿಯನ್ನು ಕರೆದುಕೊಂಡು ಬಂದು ಯೋಜನೆ ಸಿದ್ಧಪಡಿಸಿದರು. ಆ ಯೋಜನೆಯ ವೆಚ್ಚ 27 ಲಕ್ಷ ರೂಪಾಯಿಗಳು. ಅದರಲ್ಲಿ ಹದಿನೈದು ಶೌಚಗೃಹಗಳನ್ನು ನಿರ್ಮಿಸಲು ನಿರ್ಧರಿಸಲಾಯಿತು.

ಕಾಮಗಾರಿ ಪ್ರಾರಂಭವಾದಾಗ ಕಟ್ಟಡಕ್ಕಾಗಿ ತರಿಸಿದ ಇಟ್ಟಂಗಿಯ ಮೇಲೆ ಶೌಚ ಮಾಡಿ ಹೋಗುತ್ತಿದ್ದರು. ಹಲವಾರು ಕಷ್ಟಕಾರ್ಪಣ್ಯಗಳು ಅಲ್ಲಿದ್ದ ಜನರಿಂದಲೇ ಆಯಿತು. ಇದರಿಂದಾಗಿ ಕೆಲಸಕ್ಕೆ ಬರುವ ಕಾರ್ಮಿಕರು ಬರುವುದಿಲ್ಲ ಎಂದು ಹೇಳಿದಾಗ ಇವರೇ ರಜೆಯನ್ನು ಹಾಕಿ ಮುಂದೆ ನಿಂತು ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿದರು.

ಆ ಶೌಚಾಲಯಗಳು ಹೈಟೆಕ್ಕಾಗಿ ಕಟ್ಟಲ್ಪಟ್ಟದೆ ಶೌಚಾಲಯದಲ್ಲಿ ಕೈ ತೊಳೆಯಲು ಮಾರ್ಜಕಗಳು, ಹೆಚ್ಚು ಹೆಣ್ಣು ಮಕ್ಕಳು ಬಂದರೆ ಅವರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಅಂಗವಿಕಲ ಮತ್ತು ವೃದ್ಧರಿಗೆ ಎರಡು ಪ್ರತ್ಯೇಕ ಕಮೋಡಗಳು ಶೌಚಾಲಯಕ್ಕೆ ನೀರು ಪೂರೈಸಲು ಎರಡು ಸಿಂಟೆಕ್ಸ್‌ಗಳು ಮತ್ತು ಬೆಳಕಿಗಾಗಿ ಸೌರ ವಿದ್ಯುತ್ ವ್ಯವಸ್ಥೆ ಮಾಡಲಾಯಿತು.

ಇದರ ಮತ್ತೊಂದು ವಿಶೇಷತೆ ಎಂದರೆ ಶೌಚಾಲಯಗಳನ್ನು ಊರಿನ ಮಹಿಳೆಯರಿಂದಲೇ ಉದ್ಘಾಟಿಸಿದರು.

ಈ ಶೌಚಾಲಯಗಳನ್ನು ಯಾವ ಜಾತಿ ಧರ್ಮ ಭೇದವಿಲ್ಲದೆ ಎಲ್ಲರೂ ಬಳಸುವುದಕ್ಕೆ ಇಲ್ಲಿ ಎಲ್ಲರಿಗೂ ಅವಕಾಶ ಇರುವುದು ವಿಶೇಷತೆ.

ಈಗಿನ ವರ್ತಮಾನ ಕಾಲದಲ್ಲಿ ಪ್ರಚಾರದ ಭರಾಟೆ ಜೋರು. ಒಂದು ಲೋಟ ಕೊಟ್ಟರೂ ತಮ್ಮ ಹೆಸರು ಹಾಕಿಸಿಕೊಳ್ಳುವರ ಮಧ್ಯದಲ್ಲಿ ಇವರು ಶೌಚಾಲಯಗಳ ಮೇಲೆ ನಮ್ಮೂರು



ಯುವ ಸೇವಾ ಸಮಿತಿಯೆಂದು ಹೆಸರು ಬರಿಸಿದರು. ಆ ಶೌಚಾಲಯಗಳಿಗೆ ಸುಂದರವಾದಂತ ಸುಣ್ಣ ಬಣ್ಣ ಬಳಿಸಿ ಅಮೂಲ್ಯವಾದ ವಾಕ್ಯಗಳನ್ನು ಬರೆಸಿದ್ದಾರೆ.

ಈಗಿನ ಕಾಲಮಾನದಲ್ಲಿ ಮಂದಿರ ಮಸೂದಿ ಕಟ್ಟಿ ಜನಪ್ರಿಯತೆಗಾಗಿ ಹಂಬಲಿಸುವವರ ಮಧ್ಯೆ ಬೆಂಗಳೂರಿನ ಆದಿ ಜಾಂಬವ ನಿಗಮದ ಪ್ರಧಾನ ವ್ಯವಸ್ಥಾಪಕ ರಾಮನಗೌಡ ಕನ್ನೊಳ್ಳಿ ಅಂಥವರು ಬೆರಳಣಿಕೆಯಷ್ಟು. ಇಂತಹ ಕಾರ್ಯಗಳು ಇತರರಿಗೂ ಮಾದರಿಯಾದರೆ ಪ್ರತಿ ಹಳ್ಳಿಗಳು ಮಹಾತ್ಮ ಗಾಂಧಿ ಕಂಡ ಕನಸಿನ ಗ್ರಾಮಗಳಾಗುವುದರಲ್ಲಿ ಸಂಶವೇ ಇಲ್ಲ ಎಂದು ಹೇಳಬಹುದು.

## ಮಕ್ಕಳಿಗೆ ಉತ್ತಮ ಸಂಸ್ಕಾರ ಮತ್ತು ಶಿಕ್ಷಣ ನೀಡಿ: ಎಸಿ ಗದ್ಯಾಳ



**ಉದಯರಶ್ಮಿ ನ್ಯೂಸ್**

ಇಂಡಿ: ಶ್ರೀಮಂತಿಕೆಯಿಂದ ಎಲ್ಲವನ್ನೂ ಪಡೆಯಲು ಸಾಧ್ಯವಿಲ್ಲ. ಪೋಷಕರು ಮಕ್ಕಳ ಬಗ್ಗೆ ಗಮನಹರಿಸುತ್ತಾ ಅವರ ಭಾವನೆಗೆ ಒತ್ತು ನೀಡುವುದರ ಜತೆಗೆ ಉತ್ತಮ ಸಂಸ್ಕಾರದ ಪಾಠ ಕಲಿಸಬೇಕು ಎಂದು ಉಪವಿಭಾಗಾಧಿಕಾ-ರಿಗಳಾದ ಆಬೀದ್ ಗದ್ಯಾಳ ಹೇಳಿದರು.

ಪಟ್ಟಣದ ಮಾಡಲ್ ಪಬ್ಲಿಕ್ ಶಾಲೆಯಲ್ಲಿ ಜರುಗಿದ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜವೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಅಭಿವೃದ್ಧಿ ಪಥದತ್ತ ಸಾಗಬೇಕಾದರೆ ಶಿಕ್ಷಣ ಅತ್ಯಗತ್ಯ. ಪ್ರತಿಯೊಬ್ಬರೂ ಒಗ್ಗಟ್ಟಾಗಿ ಒಂದಾಗಿ ಮಕ್ಕಳ ಶಿಕ್ಷಣದ ಅಭಿವೃದ್ಧಿಗೋಸ್ಕರ ಶ್ರಮಿಸೋಣ. ಪಾಲಕರು ಮಕ್ಕಳಿಗಾಗಿ ಆಸ್ತಿ ಮಾಡಬೇಡಿ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ದೇಶದ ಆಸ್ತಿಯನ್ನಾಗಿ ಮಾಡಿ. ಸಮಾಜ ನಮಗಾಗಿ ಏನು ಕೊಟ್ಟಿದೆ ಎನ್ನುವುದಕ್ಕಿಂತ ಸಮಾಜ-ಕ್ಕಾಗಿ ನಾವು-ನೀವು ಏನು ಕೊಟ್ಟಿದ್ದೇವೆ ಎನ್ನುವುದು ಮುಖ್ಯ ಎಂದರು.

ಜಿಒಸಿಸಿ ಬ್ಯಾಂಕ್ ಉಪಾಧ್ಯಕ್ಷರಾದ ಅಲ್ಲಾಬಕ್ಷ ವಾಲಿಕಾರ, ಶಿಕ್ಷಕ ನಾಸೀರ ಇನಾಮದಾರ ಮಾತನಾಡಿದರು.

ಮಕ್ಕಳಿಂದ ಆಕರ್ಷಕ ಮನೋರಂಜನಾ ಕಾರ್ಯಕ್ರಮಗಳು ಜರುಗಿತು. ಕ್ರೀಡೆಯಲ್ಲಿ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಪದಕಗಳನ್ನು ವಿತರಿಸಲಾಯಿತು.

ಮಫ್ತಿ ಅಬ್ದುಲ್ ರಹೇಮಾನ ಅರಬ, ಸಂಸ್ಥೆಯ ಅಧ್ಯಕ್ಷರಾದ ಅತೀಕ ಶೇಖ್, ಕಾರ್ಯದರ್ಶಿಯಾದ ಜಾವಿದ ಮುಲ್ಲಾ, ಅಲಹಾಜ್ ನಿಸಾರ ಬಾಗವಾನ, ಪುರಸಭೆ ಸದಸ್ಯರಾದ ಮುಸ್ತಾಕ ಇಂಡಿಕರ, ಅಯ್ಯುಬ ಬಾಗವಾನ, ಶಬ್ಬಿರ ಖಾಜಿ, ಬಿಜಾಪುರ ಮಹಾನಗರ ಪಾಲಿಕೆ ಸದಸ್ಯ ಇರಫಾನ ನಾಡೆವಾಲೆ, ಉರ್ದು ಸಿ.ಆರ್.ಪಿ ಪರವೇಜ್ ಪಟೇಲ್, ಸಮಾಜ ಸೇವಕ ಹಸನ ಮುಜಾವರ, ಮಹಿಬೂಬ ಶೇಖ್, ಫಯಾಜ ಬಾಗವಾನ, ಹಾಫಿಜ ಶಾಕೀರ ಮುಲ್ಲಾ, ದಾದಾಹಯಾತ ನಾಯಿಕೋಡಿ, ಶಿಕ್ಷಕರಾದ ಅಬ್ದುಲಾ ಪಟೇಲ್, ಮುಜೀಬ ಅಫಜಲಪೂ, ನಬಿರಸೂರ ಬಾಗವಾನ ಮತ್ತಿತರಿದ್ದರು.

## ಅನುದಾನ ಲಭ್ಯತೆಗೆ ಪ್ರಯತ್ನಿಸುವೆ: ಶಾಸಕ ಯಶವಂತರಾಯಗೌಡ ಪಾಟೀಲ

**ಉದಯರಶ್ಮಿ ನ್ಯೂಸ್**

ಇಂಡಿ: ತಾಲೂಕಿನಲ್ಲಿ ಕಳೆದ 20 ವರ್ಷಕ್ಕೂ ಹೆಚ್ಚು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅನೇಕ ಶಿಕ್ಷಣ ಸಂಸ್ಥೆಗಳಿದ್ದು ಅವುಗಳ ಅನುದಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಪಟ್ಟಣದ ರೈಲ್ವೇ ಸ್ಟೇಶನ್ ಹತ್ತಿರ ಜ್ಞಾನಗಂಗೋತ್ರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದರು.

ಕಳೆದ ವರ್ಷ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗದ ಶಾಲೆಗಳ ಪ್ರತಿನಿಧಿಗಳು ನನ್ನನ್ನು ಭೇಟಿ ಯಾಗಿದ್ದರು. ಆಗ ವಿಧಾನಸಭೆಯಲ್ಲಿ ನಿಮ್ಮ ಪರವಾಗಿ ಧ್ವನಿ ಎತ್ತಿದ್ದೇನೆ. ಈಗ ನಮ್ಮ ಸರಕಾರವಿದೆ. ಶಿಕ್ಷಣ ಸಚಿವ-ರಿಗೆ ಮತ್ತು ಮುಖ್ಯಮಂತ್ರಿಗಳಿಗೆ ನಿಮ್ಮ ಭಾವನೆಗಳನ್ನು ಮನದಟ್ಟು ಮಾಡುವೆ ಎಂದರು.



2013ರಿಂದ 2024ರವರೆಗೆ ತಾಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಶಾಸಕರ ಅನುಧಾನದಲ್ಲಿ 28.25 ಕೋಟಿ ಖರ್ಚು ಮಾಡಲಾಗಿದೆ ಎಂದರು.

ತಡವಲಗಾ ಶ್ರೀಮಠದ ಅಭಿನವ ರಾಚೋಟೇಶ್ವರ ಶಿವಾಚಾರ್ಯರು ದಿವ್ಯಸಾನಿಧ್ಯವಹಿಸಿ ಆರ್ಶೀವಚನ ನೀಡಿ, ಉಪವಿಭಾಗಾಧಿಕಾರಿ ಅಬೀದ ಗದ್ಯಾಳ , ಕ.ಸಾ.ಪ ತಾಲೂಕಾ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ,ಧನರಾಜ ಮುಜಗೊಂಡ ಮಾತನಾಡಿದರು.

ಡಯಟ್ ಉಪನ್ಯಾಸಕ ಎ.ಆರ್ ಮುಜಾವರ, ಚಿಕ್ಕಬೇವನೂರ ಗ್ರಾ.ಪಂ ಅಧ್ಯಕ್ಷ ಸುನೀಲ ಚವ್ಹಾಣ, ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಜಾವೀದ ಮೋಮಿನ, ಜಟ್ಟೆಪ್ಪ ರವಳಿ, ಇಲಿಯಾಸ ಬೋರಾಮಣಿ, ಎಂ.ಡಿ ಶೇಖ, ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜಿ.ಎನ್ ಘೋರ್ಪಡೆ ಮುಖ್ಯ ಗುರುಗಳು ,ಶಿಕ್ಷಕರು ಶಾಲಾ ಸಿಬಂದ್ದಿಗಳು ಉಪಸ್ಥಿತರಿದ್ದರು.

## ದೇಶಸೇವೆ ನನಗೆ ತೃಪ್ತಿ ನೀಡಿದೆ: ಮಲ್ಲಿಕಾರ್ಜುನ ನಾವಿ

ವಿಜಯಪುರ : ಶ್ರೀಯುತ ಮಲ್ಲಿಕಾರ್ಜುನ ತಂ. ಗೋಲಪ್ಪ ನಾವಿ ಇವರು 22 ವರ್ಷಗಳ ಸುದೀರ್ಘ ದೇಶಸೇವೆ ಮಾಡಿ ಸೇನೆಯಿಂದ ನಿವೃತ್ತಿಗೊಂಡ ಪ್ರಯುಕ್ತ ಇವರನ್ನು ತಿಕೋಟಾ ತಾಲೂಕಿನ ತೊರವಿ ಗ್ರಾಮದಲ್ಲಿ ಭಾರತ ಸೇನಾ ಅಭಿಮಾನಿ ಬಳಗ ಹಾಗೂ ಹಡಪದ ಅಪ್ಪಣ್ಣ ಸಮಾಜ ಸೇವಾ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿ ಶ್ರೀಯುತ ಮಲ್ಲಿಕಾರ್ಜುನ ತಂ. ಗೋಲಪ್ಪ ನಾವಿ ಅವರು ಮಾತನಾಡಿ, ನನಗೆ ದೇಶ ಸೇವೆ ಮಾಡುವ ಸುವರ್ಣ ಅವಕಾಶ ದೊರಕಿರುವದು ನನ್ನ ಸೌಭಾಗ್ಯ. ನಾವು 22 ವರ್ಷಗಳ ಕಾಲ ದೇಶ ಸೇವೆ ಮಾಡಿದ್ದು, ಇನ್ನಷ್ಟು ದಿನಗಳ ಕಾಲ ನಾನು ಸೇವೆ ಮಾಡಬೇಕೆಂಬ ಅಭಿಲಾಷೆಯನ್ನು ಹೊಂದಿದೆ. ದೇಶಸೇವೆ ಎಷ್ಟು ವರ್ಷ ಮಾಡಿದರೂ ಕಡಿಮೆ ಹಾಗೂ ಭಾರತ ದೇಶವು ವಿವಿದೆಡೆಯಲ್ಲಿ ಏಕತೆಯನ್ನು ಕಂಡುಕೊಂಡಿರುವ



ದೇಶ ಇಲ್ಲಿ ಎಲ್ಲ ಧರ್ಮದ ಜನರು ಇದ್ದು,ಸೌಹಾರ್ದತೆಯಿಂದ ಇರುವದ-ರಿಂದ ನಾವು ನಿರ್ಭಯವಾಗಿ ದೇಶ ಸೇವೆ ಸಲ್ಲಿಸಿದ ಹೆಮ್ಮೆ ನನಗೆ ತೃಪ್ತಿಕರ ತಂದಿದೆ. ಆದ್ದರಿಂದ ದೇಶದ ಪ್ರತಿಯೊಬ್ಬ ಪ್ರಜೆಯು ದೇಶ ಸೇವೆ ಮಾಡುವಂತಾಗಲಿ ಎಂದು ಹಾರೈಸಿದರು. ಇದರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ತಮ್ಮ ಅಭಿಮಾನದ ನುಡಿಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಅಪ್ಪಣ್ಣ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಗೋಲಪ್ಪ ಬಿ. ನಾವಿ, ನಿರ್ದೇಶಕರಾದ ಹಡಪದ ಅಪ್ಪಣ್ಣ ವಿವಿದೋದ್ದೇಶಗಳ ಸಹಕಾರ ಸಂಘ, ನಿರ್ದೇಶಕರಾದ ಶಿವಾನಂದ ಆರ್. ನಾವಿ, ದುಂಡವ್ವ ಗೋ. ನಾವಿ, ಶೈಲಾ ಈರಪ್ಪ ಹಡಪದ, ಅಂಬಿಕಾ ಸಿ. ನಾವಿ, ಭುವನೇಶ್ವರಿ ಶ್ರೀ ಹಡಪದ, ಇನ್ನಿತರರು ಇದ್ದರು.

## ಇಂದು ಕನ್ನಡ ಜಾನಪದ ಪರಿಷತ್ ದಿನಾಚರಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ. ತಾಲೂಕಿನ ಕುಂಟೋಜಿ ಸಂಸ್ಥಾನ ಹಿರೇಮಠದ ಪೂಜ್ಯ ಶ್ರೀ ಚನ್ನವೀರ ದೇವರ ಗುರು ಪಟ್ಟಾಧಿಕಾರ ಪ್ರಯುಕ್ತ " ಜಾನಪದ ಕಲಾ ಮೇಳ " ಮತ್ತು " ಕನ್ನಡ ಜಾನಪದ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ" ಕಾರ್ಯಕ್ರಮವನ್ನು ತಾಲೂಕಿನ ಕುಂಟೋಜಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಪೂಜ್ಯ ಚನ್ನವೀರ ದೇವರ ಸಾನಿಧ್ಯದಲ್ಲಿ ಡಾ ಆರ್ ಜಿ ಚಿಕ್ಕಮಠ ಕಾರ್ಯಕ್ರಮ ಉದ್ಘಾಟಿಸುವರು. ಕ ಜಾ ಪ ಜಿಲ್ಲಾಧ್ಯಕ್ಷ ಬಾಳನಗೌಡ ಎಸ್ ಪಾಟೀಲ ಅಧ್ಯಕ್ಷತೆ ವಹಿಸುವರು,ಕಜಾಪ ಬಸವನಬಾಗೇವಾಡಿ ಅಧ್ಯಕ್ಷ ದೇವೇಂದ್ರ ಬ ಗೋನಾಳ ಉಪನ್ಯಾಸ ನೀಡುವರು, ಮುದ್ದೇಬಿಹಾಳ ತಾಲೂಕಾಧ್ಯಕ್ಷ ಎಂ ಆರ್ ಮುಲ್ಲಾ ಪ್ರಾಸ್ತಾವಿಕ ನುಡಿ ಹೇಳುವರು, ಅತಿಥಿಗಳಾಗಿ ಅಬ್ದುಲ್ ರೆಹಮಾನ್ ಬಿದರಕುಂದಿ, ವೀರೇಶಗೌಡ ಪಾಟೀಲ ( ಮಿಣಜಗಿ) ಬಿ ಬಿ ಭೋವಿ ( ಹಿರೇಮುರಾಳ) ಹಾಗೂ ಕಜಾಪ ಜಿಲ್ಲಾ ಸಂ ಕಾರ್ಯದರ್ಶಿ ಪುಂಡಲೀಕ ಮುರಾಳ, ಸದಸ್ಯ ಮೌಲಾಸಾಹೇಬ ಜಹಾಗೀರದಾರ ಮತ್ತು ಹಿರೇಮುರಾಳ ಕಜಾಪ ವಲಯ ಅಧ್ಯಕ್ಷ ಗಿರೀಶಗೌಡ ಪಾಟೀಲ ಆಗಮಿಸುವರು ಕಾರ್ಯಕ್ರಮದಲ್ಲಿ ವಿವಿಧ ಹತ್ತು ಕಲಾ ತಂಡಗಳ ಪ್ರದರ್ಶನ ಮತ್ತು ಕಲಾವಿದರ ಸನ್ಮಾನ ನಡೆಯಲಿದೆ ಎಂದು ಕನ್ನಡ ಜಾನಪದ ಪರಿಷತ್ ವಿಜಯಪುರ ಜಿಲ್ಲಾಧ್ಯಕ್ಷ ಬಾಳನಗೌಡ ಎಸ್ ಪಾಟೀಲ (ಪಡಗಾನೂರ) ತಿಳಿಸಿದ್ದಾರೆ.

## ಈಜಲು ಹೋದ ಯುವಕ: ನೀರು ಪಾಲು



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ :ಈಜಲು ತೆರಳಿದ್ದ ವಿವಾಹಿತನೋರ್ವ ಪಟ್ಟಣದ ಶಿರೋಳ ರಸ್ತೆಯ ಬಳಿ ಇರುವ ಕಾಲುವೆಯಲ್ಲಿ ನೀರು ಪಾಲಾಗಿದ್ದಾನೆ.

ಪಟ್ಟಣದ ಮೇಲಿನ ಓಣಿಯ ನಿವಾಸಿ ಸೈಫುದ್ದೀನ ಸಾತಿಹಾಳ(35) ಮೃತದುದೈವಿ.ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕಠಾಣೆಯ ಸಿಬ್ಬಂದಿಗಳಾದಎಲ್.ಎಫ್.ಪೋದ್ದಾರ, ಸುಭಾಷರಾಠೋಡ, ನಾಗೇಶ ರಾಠೋಡ, ಭೀಮರಾವ್ ನಾಟೆಕಾರ, ಚಂದ್ರಶೇಖರ ಮಾದರ, ಮಹೇಶ ಕರಡ್ಡಿ ಸೇ-ರಿದಂತೆಇನ್ನೀತರರತಂಡಎರಡು ದಿನಗಳ ಕಾಲ ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಹೊರತೆಗೆದರು.

ಈಜಲೆಂದು ಕಾಲುವೆಗೆ ತೆರಳಿದ್ದು ನೀರಿನ ಸುಳಿಯಲ್ಲಿ ಸಿಕ್ಕು ಈಜಲು ಸಾಧ್ಯವಾಗದೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದು ಈ ಘಟನೆ ಆಕಸ್ಮಿಕವಾಗಿದೆ. ಮೃತನ ಮರಣದಲ್ಲಿಯಾವುದೇ ಸಂಶಯವಿಲ್ಲ ಎಂದು ಮೃತನ ಪತ್ನಿ ಪರ್ವಿನಬಾನು ಮುದ್ದೇಬಿಹಾಳ ಪೋಲೀಸರಿಗೆ ತಿಳಿಸಿದ್ದಾಳೆ.

## ಮಾರಣಾಂತಿಕ ಹಲ್ಲೆ & ಅತ್ಯಾಚಾರಕ್ಕೆ ಪ್ರಯತ್ನಿಸಿದವರ ಮೇಲೆ ಕಠಿಣ ಕ್ರಮಕ್ಕೆ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ : ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಮ್ಯಾದ್ರಾಳ ತಾಂಡಾದ ಅಂಗವಿಕಲ ಕುಟುಂಬದ ಮೇಲೆ ನಡೆದಿರುವ ಮಾರಣಾಂತಿ-ಕ ಹಲ್ಲೆ ಮತ್ತು ಅತ್ಯಾಚಾರಕ್ಕೆ ಪ್ರಯತ್ನಿಸಿದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಿ ಅನ್ಯಾಯಕೊಳ್ಳಗಾದ ಕುಟುಂಬಕ್ಕೆ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗವಿಕಲ ಆರ್.ಪಿ.ಡಿ. ಟಾಸ್ಕ್ ಪೋರ್ಸ್ ಹಾಗೂ ಕರ್ನಾಟಕ ಎಕ್ಸಸಬಿಲಿಟಿ ಟಾಸ್ಕಪೋರ್ಸ್ (ಅಂಗವಿಕಲರ ಸಂಘ ಸಂಸ್ಥೆಗಳ ಒಕ್ಕೂಟ ಜಿಲ್ಲಾ ಸಮಿತಿ ವಿಜಯಪುರ) ವತಿಯಿಂದ ವಿಜಯಪುರ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀಮತಿ ಸಬಿಯಾ ಬೇಗಂ ಡಿ. ಮತ್ತೂರ್ ಮಾತನಾಡಿ ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಮ್ಯಾದ್ರಾಳ ತಾಂಡಾದಲ್ಲಿ ದಿನಾಂಕ 18-02-2024 ರಂದು ಬೆಳಗ್ಗೆ ಸುಮಾರು 9-30 ಗಂಟೆಗೆ ಹಾಡು ಹಗಲನಲ್ಲಿಯೇ ಅಂಗವಿಕಲ ದಂಪತಿಗಳಾದ ಶ್ರೀ ಕಂಠೆಪ್ಪ ಮತ್ತು ಕಾಳಮ್ಮರ ಮಗಳಾದ ಶಾರದ ಒಬ್ಬಳೆ ಇರುವುದನ್ನು ಗುರುತಿಸಿಕೊಂಡು ಸುಮಾರು 7-8 ಮಂದಿ ಆಕೆಯನ್ನು ಅತ್ಯಾಚಾರ ಎಸಗಲು ಮುಂದಾಗಿದ್ದು, ಅತ್ಯಾಚಾರ ವಿರೋಧಿಸಿದಾಗ ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ . ಆಗಷ್ಟೇ ಬಂದು ಬಿಡಿಸಲು ಯತ್ನಿಸಿದ ಅಂಗವಿಕಲೆ ತಾಯಿ ಕಾಳಮ್ಮ ಇವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

ಪ್ರಕರಣಕ್ಕೆ ಸಂಬಂದಿಸಿದಂತೆ ದಿನಾಂಕ 18-02-2024 ರಂದು ಮಸ್ಕಿ ವೃತ್ತದ ಆರಕ್ಷರ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿ 15 ದಿನಗಳಾದರೂ ಇಲ್ಲಿಯವರೆಗೆ ಅದೇ ಗ್ರಾಮದಲ್ಲಿರುವ ಪ್ರಕರಣ-



ಕ್ಕೆ ಸಂಬಂದಿಸಿದ ಎಲ್ಲಾ ಅಪರಾಧಿಗಳನ್ನು ಠಾಣಾಧಿಕಾ-ರಿಗಳು ಬಂಧಿಸಿರುವುದಿಲ್ಲ. ರಾಜ್ಯದೆಲ್ಲೆಡೆ ಅಂಗವಿಕಲರ ದೈಹಿಕ ದೌರ್ಬಲ್ಯ ಹಾಗೂ ಆರ್ಥಿಕ ದುರ್ಬಲತೆಯನ್ನು ಕಾಮುಕರು ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ರಾಜ್ಯದಲ್ಲಿ ಅಂಗವಿಕಲರಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷರಾದ ಮೋದಿನಪಾಶಾ ಜಾಗೀರದಾರ ಮಾತನಾಡಿ, ರಾಜ್ಯದ ಅಂಗವಿಕಲರ ರಕ್ಷಕರಾದ ತಾವುಗಳು ಶೀಘ್ರದಲ್ಲಿ ಸದರಿ ಪ್ರಕರಣದ ಎಲ್ಲಾ ಅಪರಾಧಿಗಳನ್ನು ಬಂಧಿಸಿ ಈ ಕಾನೂನು ಕ್ರಮ ಜರುಗಿಸಿ ಹಾಗೂ ಅನ್ಯಾಯಕೊಳ್ಳಗಾದ ಅಂಗವಿಕಲ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶಿಸಬೇಕು ಹಾಗೂ ನೊಂದ ವಿಕಲಚೇತನರ ಕುಟುಂಬಕ್ಕೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಿಕೊಡಬೇಕೆಂದು ರಾಜ್ಯದ ಸಮಸ್ತ ಅಂಗವಿಕಲರ ಪರವಾಗಿ ಆಗ್ರಹಪಡಿಸಿದರು.

ಈ ಸಂದರ್ಭದಲ್ಲಿ ಯಲ್ಲಮ್ಮ ಮುಳವಾಡ, ಮಹೇಶ ಮುಧೋಳ, ಸಾವಿತ್ರಿ ಮೋರೆ, ಶಶಿಕಲಾ ಸೋನಾರಿ, ಶಿವುಬಾಯಿ ಹಡಪದ, ಉಷಾ ಮೇಲಿಕರ, ಇನ್ನಿತರರು ಇದ್ದರು.

## ನೂತನ ಕೃಷಿ ಅಧಿಕಾರಿಗೆ ಗ್ರಾಮಸ್ಥರಿಂದ ಸ್ವಾಗತ



**ಉದಯರಶ್ಮಿ ನ್ಯೂಸ್**

ಢವಳಗಿ:- ಗ್ರಾಮದ ರೈತ ಸಂಪರ್ಕ ಕೇಂದ್ರದ ಅಧಿಕಾರಿಯಾದ ಅಶೋಕ ಇಟಗಿ ಅವರು ಫೆಬ್ರುವರಿ 29 ರಂದು ನಿವೃತ್ತಿ ಹೊಂದಿದರು. ನೂತನ ಕೃಷಿ ಅಧಿಕಾ-ರಿಯಾಗಿ ಗೋವಿಂದರೆಡ್ಡಿ ಮೆದಕಿನಾಳ ಅವರು ಫೆಬ್ರುವರಿ 4 ಸೋಮವಾರದಂದು ಅಧಿಕಾರ ಸ್ವೀಕರಿಸಿದರು.ನೂತನ ಅಧಿಕಾರಿ ಮೆದಕಿನಾಳ ಅವರಿಗೆ ಗ್ರಾಮಸ್ಥರಾದ ಸುನೀಲಗೌಡ ಬಿರಾದಾರ ಗ್ರಾಂ ಪಂ ಸದಸ್ಯರು ಢವಳಗಿ, ಸಂಗಣ್ಣ ಬೀರಗೊಂಡ, ಸಂಗಣ್ಣ ಕೋಣನವರ,ಸಾಹೇಬಗೌದ ಜಮದರಖಾನಿ,ಮುರಿಗೆಪ್ಪಗೌಡ ಕೊಣ್ಣೂರ, ಪ್ರಭು ಬ್ಯಾಡಗಿ,ಮಹಾದೇವಪ್ಪ ಕೊಣ್ಣೂರ,ಮಾಂತೇಶ ದೊಡಮನಿ, ಪತ್ರಕರ್ತರಾದ ಹಣಮಂತ ಬೀರಗೊಂಡ, ಮುತ್ತು ಬೀರಗೊಂಡ, ಮತ್ತು ಸಿಬ್ಬಂದಿಗಳಾದ ಸಂಗಮೇಶ ಚೌದ್ರಿ,ಸಂಗಮೇಶ ಸಜ್ಜನ,ಮುತ್ತು ಜಾವೂರ,ನಾಗರಾಜ ಹಳಬರ,ಶರಣು ಪಾಟೀಲ ಸೇರಿದಂತೆ ಇನ್ನಿತರರು ಸೇರಿ ಸ್ವಾಗತ ಮಾಡಿಕೊಂಡರು

## ಮಾರ್ಚ್ 16 ರಂದು ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್-ಅದಾಲತ್

**ಉದಯರಶ್ಮಿ ನ್ಯೂಸ್**

ವಿಜಯಪುರ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ 2024ರ ಮಾರ್ಚ್ 16ರಂದು ಜಿಲ್ಲೆಯ ಜಿಲ್ಲಾ ಕೇಂದ್ರ ಹಾಗೂ ತಾಲೂಕಾ ಕೇಂದ್ರದ ಎಲ್ಲ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ.

ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಹುದಾದ ಎಲ್ಲಾ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಕೋರಿ ಸಲ್ಲಿಸಿರುವ ಪ್ರಕರಣಗಳು, ಕೌಟುಂಬಿಕ ವ್ಯಾಜ್ಯಗಳು, ಆಸ್ತಿಯಲ್ಲಿ ಪಾಲು ವಿಭಾಗ ಕೋರಿ ಸಲ್ಲಿಸಿರುವ ದಾವೆಗಳು, ದೂರವಾಣಿ ಬಾಕಿ ಬಿಲ್ಲು ಪಾವತಿ ಪ್ರಕರಣಗಳು, ನೀರಿನ ಬಿಲ್ಲು ಬಾಕಿ ಪಾವತಿ ಪ್ರಕರಣಗಳು, ಜೀವನಾಂಶ ಕೋರಿ ಸಲ್ಲಿಸಿರುವ ಪ್ರಕರಣಗಳು, ಕಾರ್ಮಿಕ ವ್ಯಾಜ್ಯಗಳು, ಭೂ-ಸ್ವಾಧೀನ ಪ್ರಕರಣಗಳು, ಕಂದಾಯ ಪ್ರಕರಣಗಳು, ಸಾಲ ವಸೂಲಾತಿ ಪ್ರಕರಣಗಳು, ಬ್ಯಾಂಕ್ ವ್ಯಾಜ್ಯಗಳು ಹಾಗೂ ಇತರೆ ಸಿವಿಲ್ ಪ್ರಕರಣಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗುವುದು.

ಮಾ.16ರಂದು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳುವ ಲೋಕ್ ಅದಾಲತ್‌ನಲ್ಲಿ ಕಕ್ಷಿದಾರರು ಭಾಗವಹಿಸಿ, ರಾಜಿ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡು ನೆಮ್ಮದಿಯ ಜೀವನಕ್ಕೆ ನಾಂದಿ ಹಾಡಲು ಸುವರ್ಣಾವಕಾಶವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾಯಾಧೀಶ ಸಂತೋಷ ಕುಂದರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅದಾಲತ್ ಮಾ.16 ಕ್ಕೆ ಮುಂದೂಡಿಕೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ : ಮಾ.9 ರಂದು ನಡೆಯಬೇಕಿದ್ದರಾಷ್ಟ್ರೀಯ ಲೋಕ್ ಅದಾಲತ್ ನ್ನು ಮಾ.16 ಕ್ಕೆ ಮುಂದೂಡಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಯಶಂಕರ ಆದ-ೇಶಿಸಿದ್ದಾರೆ. ಅಂದುಎಲ್ಲ ನ್ಯಾಯವಾದಿಗಳು ಹಾಜರಾಗಿತಮ್ಮ ಪ್ರಕರಣಗಳನ್ನು ರಾಜಿ ನಸಂಧಾನದ ಮೂಲಕ ಇತ್ಯಥ-ರ್ಪಡಿಸಿಕೊಂಡು ಲೋಕ್‌ಅದಾಲತ್‌ಅನ್ನು ಯಶಸ್ವಿಗೊಳಿಸುವಂತೆ ತಾಲೂಕು ಕಾನೂನು ಸೇವಾ ಸಮಿತಿಅಧ್ಯಕ್ಷರೂಆದ ಹಿರಿಯ ಶಿವಿಲ್ ನ್ಯಾಯಾಧೀಶೆ ಲಕ್ಷ್ಮೀ

## ಕನ್ನೊಳ್ಳಿ, ಬಮ್ಮನಜೋಗಿ : ಇಂದು ವಿದ್ಯುತ್ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ದಿ:6 ರಂದು(ಇಂದು) 110 ಕೆ.ವ್ಹಿ ದೇವರಹಿಪ್ಪರಗಿಯಿಂದ 110 ಕೆ.ವ್ಹಿ ಸಿಂದಗಿಗೆ ಹೋಗುವ ವಿದ್ಯುತ್ತಿನ ಗೋಪುರ ಹಾಗೂ ವಾಹಕದ ಬದಲಾವಣೆ ಕಾಮಗಾರಿ ಕೈಗೊಂಡಿದ್ದು, ಈ ಸಂದರ್ಭದಲ್ಲಿ ಕನ್ನೊಳ್ಳಿ, ಬಮ್ಮನಜೋಗಿ ಫೀಡರ್‌ಗಳಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾನ್ಹ 2.00 ಗಂಟೆಯುವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ನಂತರ 3.00 ಗಂಟೆಯಿಂದ ರಾತ್ರಿ 10.00 ಗಂಟೆಯುವರೆಗೆ ವಿದ್ಯುತ್ ಸರಬರಾಜು ಮಾಡಲಾಗುವುದು. ಕಾರಣ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕಾಗಿ ಹೆಸ್ಕಾಂ ಕಾರ್ಯ ನಿರ್ವಾಹಕ ಅಭಿಯಂತರ ದೇವರಹಿಪ್ಪರಗಿ ಇವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಮಾ.11ರಂದು ಮಹಿಳಾ ವಿವಿಯಲ್ಲಿ 15ನೇ ವಾರ್ಷಿಕ ಘಟಿಕೋತ್ಸವ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 15 ನೇ ವಾರ್ಷಿಕ ಘಟಿಕೋತ್ಸವವು ಮಾ.11 ಸೋಮುವಾರದಂದು ವಿಶ್ವವಿದ್ಯಾನಿಲಯದ ಆವರಣದ ಜ್ಞಾನಶಕ್ತಿ ಕ್ಯಾಂಪಸ್‌ನಲ್ಲಿ ನಡೆಯಲಿದೆ.

ಘಟಿಕೋತ್ಸವದ ಘನ ಅಧ್ಯಕ್ಷತೆಯನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರು ಹಾಗೂ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ವಹಿಸಲಿದ್ದಾರೆ.

ಉನ್ನತ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಡಾ.ಎಂ.ಸಿ. ಸುಧಾಕರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹರಿಯಾಣದ ಕೇಂದ್ರಿಯ ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಪ್ರೊ. ಸುಷ್ಮಾ ಯಾದವ್ ಭಾಗವಹಿಸಲಿದ್ದಾರೆ. ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಬಿ.ಕೆ.ತುಳಸಿಮಾಲ, ಕುಲಸಚಿವರಾದ ಶಂಕರಗೌಡ ಶಿ. ಸೋಮನಾಳ, ಮೌಲ್ಯಮಾಪನ ಕುಲಸಚಿವರಾದ ಪ್ರೊ. ಹೆಚ್.ಎಂ. ಚಂದ್ರಶೇಖರ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟನೆ ತಿಳಿಸಿದೆ.

## ಇಂದು ವಿದ್ಯುತ್ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: 110/33/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ದೇವರ ಹಿಪ್ಪರಗಿಯಲ್ಲಿ ಹಾಗೂ 33/11 ಕೆವಿ ವಿದ್ಯುತ್ ವಿತರಣಾ ಉಪಕೇಂದ್ರ ಕೋರವಾರದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ 11ಕೆವಿ ಕನ್ನೊಳಿ ಐಪಿ ಹಾಗೂ 11ಕೆವಿ ಬಮ್ಮನಜೋಗಿ ಐಪಿ ವಾಪ್ತಿಯಲ್ಲಿ ಮಾರ್ಚ 6ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಹಾಗೂ 33/11ಕೆವಿ ಕೋರವಾರ ಮಾರ್ಗದಲ್ಲಿ ಮಧ್ಯಾಹ್ನ ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಆದ ಕಾರಣ ಗ್ರಾಹಕರು ಸಹಕರಿಸಬೇಕು ಎಂದು ಇಂಡಿ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾಕ್ ಪರ ಘೋಷಣೆ ಕೂಗಿದವರ ಬಂಧನ; ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ, ನಾವು ಮಧ್ಯಪ್ರವೇಶಿಸಲ್ಲ: ಡಿಕೆ ಶಿವಕುಮಾರ್

**ಉದಯರಶ್ಮಿ ನ್ಯೂಸ್**



ಬೆಂಗಳೂರು: ಆಡಳಿತ ಶಕ್ತಿ ಕೇಂದ್ರ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್ ಅವರ ಮೂವರು ಬೆಂಬಲಿಗರ ಬಂಧನ ವಿಚಾರದಲ್ಲಿ ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೇವೆ. ಇದರಲ್ಲಿ ನಾವು ಮಧ್ಯ ಪ್ರವೇಶಿಸಲ್ಲ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಸದಾಶಿವನಗರದ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್, ಎಫ್ ಎಸ್ ಎಲ್ ವರದಿಯಲ್ಲಿ ಪಾಕ್ ಪರ ಘೋಷಣೆ ಕೂಗಿರುವುದು ದೃಢಪಟ್ಟ ನಂತರ ಪೊಲೀಸರು ಮೂವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಧ್ವನಿ ಸ್ಯಾಂಪಲ್ ಮತ್ತು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದಾರೆ. ಇದೊಂದು ಗಂಭೀರ ವಿವಾದವಾಗಿದ್ದು, ರಾಜ್ಯದ ವರ್ಚಸ್ಸನ್ನು ಹಾಳು ಮಾಡಲು ನಾವು ಬಯಸುವುದಿಲ್ಲ. ಪೊಲೀಸರು ತಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಕುರಿತು ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ತುಂಬಾ ಗಂಭೀರವಾಗಿ ಈ ವಿಷಯನ್ನು ಪರಿಗಣಿಸಿದ್ದೇನೆ. ಎಲ್ಲಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೇನೆ. ಎಲ್ಲಿ ನೀರು ದೊರೆಯುತ್ತದೆ ಎಂಬುದನ್ನು ಗುರುತಿಸುತ್ತಿದ್ದೇವೆ. ಬೆಂಗಳೂರಿನಲ್ಲಿ ಸುಮಾರು 3,000 ಕ್ಕೂ ಹೆಚ್ಚು ಬೋರ್ ವೆಲ್ ಗಳು ಬತ್ತಿಹೋಗಿವೆ. ಅತಿ ಕಡಿಮೆ ದರದಲ್ಲಿ ಎಲ್ಲಾ ಜನರಿಗೆ ನೀರು ಪೂರೈಸಲು ನೋಡುತ್ತಿದ್ದೇವೆ. ನನ್ನ ಮನೆಯ ಬಳಿ ಬೋರ್ ವೆಲ್ ಸೇರಿದಂತೆ ಎಲ್ಲಾ ಬೋರ್ ವೆಲ್ ಗಳು ಬತ್ತಿಹೋಗಿರುವುದರಿಂದ ನಾವು ಆತಂಕಕ್ಕೀಡಾಗಿದ್ದೇವೆ ಎಂದು ತಿಳಿಸಿದರು.

# ಉತ್ತರ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ: ಕೇರಳ ಮೂಲದ ವ್ಯಕ್ತಿ ಸಾವು, ಇಬ್ಬರಿಗೆ ಗಾಯ

**ಉದಯರಶ್ಮಿ ನ್ಯೂಸ್**

ಜೆರುಸಲೆಂ: ಲೆಬನಾನ್‌ನಿಂದ ಉಡಾಯಿಸ್ಪಟ್ಟ ಕ್ಷಿಪಣಿ ಸೋಮವಾರ ಇಸ್ರೇಲ್‌ನ ಉತ್ತರದ ಗಡಿ ಮಾರ್ಗಲಿಯಟ್ ಬಳಿಯ ಹಣ್ಣಿ ತೋಟಕ್ಕೆ ಅಪ್ಪಳಿಸಿದ ಪರಿಣಾಮ ಕೇರಳ ಮೂಲದ ವ್ಯಕ್ತಿಯೊಬ್ಬರು ಮೃತಪಟ್ಟು ಮತ್ತು ಇಬ್ಬರು ಗಾಯಗೊಂಡಿದ್ದಾರೆ. ಈ ಮೂವರು ದಕ್ಷಿಣದ ಕೇರಳ ರಾಜ್ಯದವರಾಗಿದ್ದಾರೆ

ಮೃತನನ್ನು ಕೇರಳದ ಕೊಲ್ಲಂ ಮೂಲದ ಪಟ್ನಿಬಿನ್ ಮ್ಯಾಕ್ಸ್‌ವೆಲ್ ಎಂದು ಗುರುತಿಸಲಾಗಿದೆ. ಅವರ ಮೃತದೇಹವನ್ನು ಜಿವ್ ಆಸ್ಪತ್ರೆಯಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಸೋಮವಾರ ಬೆಳಗ್ಗೆ 11 ಗಂಟೆಯ ಸುಮಾರಿಗೆ ಇಸ್ರೇಲ್‌ನ ಉತ್ತರದ ಗಲಿಲಿ ಪ್ರದೇಶದಲ್ಲಿ ಮೊಶಾವ್ (ಸಾಮೂಹಿಕ ಕೃಷಿ ಸಮುದಾಯ) ಎಂಬ ತೋಟದಲ್ಲಿ ಕ್ಷಿಪಣಿ ಅಪ್ಪಳಿಸಿತು ಎಂದು ರಕ್ಷಣಾ ಸೇವೆಗಳ ವಕ್ತಾರ ಮ್ಯಾಗೆನ್ ಡೇವಿಡ್ ಆಡಮ್ (ಎಂಡಿಎ) ಝಕಿ ಹೆಲ್ಲರ್ ಪಿಟಿಐಗೆ ತಿಳಿಸಿದರು.

ಈ ಕ್ಷಿಪಣಿ ದಾಳಿಯಿಂದ ಇತರ ಇಬ್ಬರು ಕೇರಳಿಗರಾದ ಬುಷ್ ಜೋಸೆಫ್ ಜಾರ್ಜ್ ಮತ್ತು ಪಾಲ್ ಮೆಲ್ವಿನ್ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಗಂಭೀರ ಗಾಯಗೊಂಡಿದ್ದ ಜಾರ್ಜ್ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಪ–ಸ್ವಲ್ಪ ಗಾಯಗೊಂಡ ಮೆಲ್ವಿನ್ ಅವರನ್ನು ಉತ್ತರ ಇಸ್ರೇಲ್‌ನ ಸಫೆಡ್‌ನ ಜಿವ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರು ಕೇರಳದ ಇಡುಕ್ಕಿ ಜಿಲ್ಲೆಯವರು.

**ಉದಯರಶ್ಮಿ ದಿನಪತ್ರಿಕೆ**

## ಕಾವ್ಯರಶ್ಮಿ

– ಕೆ.ಎನ್.ರೀನಾ, ಮೈಸೂರು

("ನಮ್ಮ ಕಥಾ ಅರಮನೆ" ಬರಹಗಾರರು)



### ತೂಗಿರೆ ಕೃಷ್ಣನ

ಪಿಳಿಪಿಳಿ ಕಣ್ಣಲಿ ಬೋರಲು ಮಲಗಿದ
ತುಂಟನ ಮಲಗಿಸೊ ಆಟವಿದೆ॥

ಬನ್ನಿರಿ ಎಲ್ಲರು ಲಾಲಿಯ ಹಾಡುತ
ತಟ್ಟುತ ತೂಗುವ ಕೃಷ್ಣನನು॥

ನವಿಲಿನ ಗರಿಯಿರೊ ಕಿರೀಟ ತೆಗೆದಿಡಿ
ತೊಟ್ಟಿಲಲವನನು ಮಲಗಿಸುತ॥
ಮಾಧವ ಮಲಗೋ ಗುಮ್ಮನು ಬರುತಿಹ
ಮರೆಯದೆ ಕೃಷ್ಣನ ಕೇಳುತಿಹ॥

ಎಲ್ಲಿಹ ಕೇಶವ ಎನ್ನುತಲಿರುವನು
ಹೊದಿಕೆಯ ಒಳಗೆಯೆ ಅವಿತುಬಿಡು॥
ಸದ್ದನು ಮಾಡದೆ ಸವಿಯುತ ಲಾಲಿಯ
ಕಾಡದೆ ನೇತ್ರವ ಮುಚ್ಚಿಯಿಡು॥

ನಿದ್ರೆಯ ದೇವಿಯು ನಯನಕೆ ನುಸುಳಲು
ನವನೀತ ಚೋರನು ನಿದ್ರಿಸಿದ
ನಮಗದು ಸಾಹಸ ಪೋರನ ಮಲಗಿಸಿ
ತೇಲುತಲಿರುವುದು ಕಣ್ಣೆಮಗೆ॥



# ದೇಶದ ಮೊದಲ ನೀರೊಳಗಿನ ಮೆಟ್ರೋ ಸೇವೆಗೆ ಪ್ರಧಾನಿ ಮೋದಿ ನಾಳೆ ಚಾಲನೆ

**ಉದಯರಶ್ಮಿ ನ್ಯೂಸ್**



ಕೋಲ್ಕತ್ತಾ: ಭಾರತದ ಮೊದಲ ನದಿಯೊಳಗಿನ ಮೆಟ್ರೋ ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ನಾಳೆ ಉದ್ಘಾಟಿಸಲಿದ್ದಾರೆ. ಹೂಗ್ಲಿ ನದಿಯ ಅಡಿಯಲ್ಲಿ ನಿರ್ಮಿಸಲಾದ ಸುರಂಗವು ಪೂರ್ವ– ಪಶ್ಚಿಮ ಕಾರಿಡಾರ್ ನ ಹೌರಾ ಮೈದಾನ್ – ಎಸ್ ಪ್ಲೇನೇಡ್ ಸಂಪರ್ಕಿಸಲಿದೆ.

ಹೌರಾ ಮೈದಾನ್–ಎಸ್ಪ್ಲಾನೇಡ್ ಮೆಟ್ರೋ ಮಾರ್ಗ ಭಾರತದ ಯಾವುದೇ ಪ್ರಬಲ ನದಿಯ ಅಡಿಯಲ್ಲಿ ಮೊದಲ ಸಾರಿಗೆ ಸುರಂಗವನ್ನು ಹೊಂದಿದೆ. ಆದರೆ, ಹೌರಾ ಮೆಟ್ರೋ ನಿಲ್ದಾಣ ದೇಶದಲ್ಲಿಯೇ ಅತ್ಯಂತ ಆಳವಾದದ್ದು ಎನ್ನಲಾಗಿದೆ. ಹೂಗ್ಲಿ ನದಿಯು ಕೋಲ್ಕತ್ತಾ ಮತ್ತು ಹೌರಾ ಅವಳಿ ನಗರಗಳನ್ನು ಕ್ರಮವಾಗಿ ಪೂರ್ವ ಮತ್ತು ಪಶ್ಚಿಮ ದಂಡೆಗಳಲ್ಲಿ ಪ್ರತ್ಯೇಕಿಸುತ್ತದೆ. ಈ ಸಾಧನೆಯು ಎಂಜಿನಿಯರಿಂಗ್ ಜಾಣ್ಮೆಗೆ ಸಾಕ್ಷಿಯಾಗಿದೆ.

ಏಪ್ರಿಲ್ 9, 2003ರಲ್ಲಿ ಹೂಗ್ಲಿ ನದಿಯ ನೀರೊಳಗಿನ ಸುರಂಗದ ಅಡಿಯಲ್ಲಿ ಮೆಟ್ರೋ ರೈಲುಗಳ ಪ್ರಾಯೋಗಿಕ ಸಂಚಾರ ನಡೆಸಿತು. ಉದ್ಘಾಟನೆ ನಾಳೆ ನಡೆದರೂ ಪ್ರಯಾಣಿಕರ ಸೇವೆಗಳು ಒಂದಷ್ಟು ದಿನಗಳ ನಂತರ ಪ್ರಾರಂಭವಾಗುತ್ತದೆ ಮೆಟ್ರೋ ರೈಲ್ವೇ ಸಿಪಿಆರ್ ಒ ಕೌಶಿಕ್ ಮಿತ್ರಾ ತಿಳಿಸಿದ್ದಾರೆ.

# ಜಿಲ್ಲಾಡಳಿತದೊಂದಿಗೆ ಸಿಎಂ ಸಿದ್ದರಾಮಯ್ಯ ವಿಡಿಯೋ ಸಂವಾದ: ಪ್ರತಿ ಜಿಲ್ಲೆಗೆ 2 ಕೋಟಿ ರೂ. ಹೆಚ್ಚುವರಿ ಅನುದಾನ

**ಉದಯರಶ್ಮಿ ನ್ಯೂಸ್**



ಬೆಂಗಳೂರು: ಕುಡಿಯುವ ನೀರು, ಬರ ನಿರ್ವಹಣೆ, ಕೃಷಿ, ಮೇವು ಹಾಗೂ ಉದ್ಯೋಗಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ವಿಡಿಯೋ ಸಂವಾದ ನಡೆಸಿದರು.

ಈ ಬಾರಿ ಬರಗಾಲ ಎದುರಾಗಿದೆ. ಹಿಂಗಾರು ಹಾಗೂ ಮುಂಗಾರು ಮಳೆ ಕೊರತೆಯಾಗಿ ಬರಗಾಲ ಪರಿಸ್ಥಿತಿ ಉದ್ಭವಿಸಿದೆ. ಜೂನ್ ಅಂತ್ಯದವರೆಗೆ ಬರ ನಿರ್ವಹಣೆಗೆ ಸೂಕ್ತ ಯೋಜನೆ ರೂಪಿಸಬೇಕು ಕುಡಿಯುವ ನೀರು ಕೊರತೆ, ಬೆಳೆಹಾನಿ, ಮೇವು ಕೊರತೆ ಸೇರಿದಂತೆ ಇದುವರೆಗೆ ಆಗಿರುವ ಸಮಸ್ಯೆಗಳು ಮತ್ತು ಮುಂದೆ ಉದ್ಭವಿಸಬಹುದಾದ ಸಮಸ್ಯೆಗಳ ನಿವಾರಣೆಗೆ ಈಗಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬರಗಾಲದಿಂದ 48 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿದೆ. ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ಪರಿಸ್ಥಿತಿ ಗಂಭೀರವಾಗಲಿದೆ.ಪೂರ್ವ ಮುಂಗಾರು ಮಳೆ ಕೆಲವೆಡೆ ನಿರೀಕ್ಷಿಸಲಾಗಿದೆ. ಆದಾಗ್ಯೂ ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಸಿಇಓ ಪರಿಸ್ಥಿತಿಯನ್ನು ಅವಲೋಕಿಸಿ ಸೂಕ್ತ ಯೋಜನೆ ರೂಪಿಸಬೇಕು. ಮಾಧ್ಯಮಗಳಲ್ಲಿ ಪ್ರಕಟವಾಗುವ ಜನರ ಸಮಸ್ಯೆಗಳ ಕುರಿತ ವರದಿಗಳನ್ನು ಪರಿಶೀಲಿಸಿ, ಅವುಗಳಿಗೆ ತಕ್ಷಣವೇ ಸ್ಪಂದಿಸಬೇಕು.ಕುಡಿಯುವ ನೀರಿನ ತೊಂದರೆಯಾಗಬಾರದು. ಟ್ಯಾಂಕರ್, ಖಾಸಗಿ ಕೊಳವೆಬಾವಿ ಸೇರಿದಂತೆ ಯಾವುದೇ ಜಲಮೂಲಗಳಿಂದ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು. ನೀರು ಪೂರೈಕೆಗೆ ಅಗತ್ಯವಿರುವ ಅನುದಾನವನ್ನು ರಾಜ್ಯ ಸರ್ಕಾರ ಒದಗಿಸಲಿದೆ ಎಂದರು.

ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಿಎಂ ಸಿದ್ದರಾಮಯ್ಯ ವಿಡಿಯೋ ಕಾನ್ಫರೆನ್ಸ್

ವೃಷಭಾವತಿ ಏತ ನೀರಾವರಿ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ ಸಿಎಂ ಸಿದ್ದರಾಮಯ್ಯ

ಬರಗಾಲ ಸಂದರ್ಭದಲ್ಲಿ ನರೇಗಾ ಉದ್ಯೋಗ ದಿನಗಳನ್ನು 100 ರಿಂದ 150 ದಿನಗಳಿಗೆ ಹೆಚ್ಚಿಸಬೇಕು ಎಂದು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.ನರೇಗಾ ಉದ್ಯೋಗ ದಿನಗಳನ್ನು ಹೆಚ್ಚಿಸುವುದರಿಂದ ಜನರು ಗುಳೆ ಹೋಗುವುದನ್ನು ತಪ್ಪಿಸಬಹುದು ಎಂದು ಮುಖ್ಯಮಂತ್ರಿಗಳು ಹೇಳಿದರು.ಕುಡಿಯುವ ನೀರು ಸಮಸ್ಯೆ ಕಂಡುಬಂದಾಗ ಅಧಿಕಾರಿಗಳು ತಕ್ಷಣವೇ ಸ್ಪಂದಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಲು ಅನುಕೂಲವಾಗುವಂತೆ ತಾಲ್ಲೂಕು ಮಟ್ಟದಲ್ಲಿ ಕಂಟ್ರೋಲ್ ರೂಮ್ ಆರಂಭಿಸಬೇಕು. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ರಜೆ ಮೇಲೆ ತೆರಳದೇ ಜನರ ಸಮಸ್ಯೆ ನಿವಾರಣೆಗೆ ಶ್ರಮಿಸಬೇಕು.

ತಾಲ್ಲೂಕುಮಟ್ಟದ ಟಾಸ್ಕ್ ಫೋರ್ಸ್ ಗಳು ನಿಯಮಿತವಾಗಿ ಸಭೆ ನಡೆಸುವ ಮೂಲಕ ಮುಂಜಾಗ್ರತಾ ಕ್ರಮಗಳ ಬಗ್ಗೆ ನಿರ್ಧರಿಸಬೇಕು. ಮೇವಿನ ಕಿಟ್ ಗಳನ್ನು ರೈತರಿಗೆ ನೀಡಲಾಗಿದೆ. ರೈತರಯ ಬೆಳೆದ ಮೇವು ಶೇಖರಣೆಗೆ ಕ್ರಮ ವಹಿಸಬೇಕು. ಇದಲ್ಲದೇ ಅಂತರ್ ಜಿಲ್ಲಾ ಮೇವು ಸಾಗಾಣಿಕೆ ಮೇಲೆ ನಿಗಾ ವಹಿಸಬೇಕು.ಬರ ನಿರ್ವಹಣೆಗೆ ಸರಕಾರ ಅನೇಕ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದೆ. ಐದು ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಿಂದ ಈ ಬಾರಿ ಬರಗಾಲದ ತೀವ್ರತೆಯಲ್ಲಿಯೂ ಜನರಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.


ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಅನುದಾನವಿದೆ. ಹೆಚ್ಚುವರಿಯಾಗಿ ಪ್ರತಿ ಜಿಲ್ಲೆಗೆ ಎರಡು ಕೋಟಿ ರೂಪಾಯಿ ಅನುದಾನ ನೀಡಲಾಗುವುದು, ವಿದ್ಯುಚ್ಛಕ್ತಿ ತೊಂದರೆಯಾಗಬಾರದು.ಹೊಸ ಕೊಳವೆಬಾವಿಗಳಿಗೆ ಯಾವುದೇ ನೆಪ ಹೇಳದೇ ಕೂಡಲೇ ವಿದ್ಯುತ್ ಸಂಪರ್ಕ ಒದಗಿಸಬೇಕು. ಅಗತ್ಯ ಕಂಡುಬಂದರೆ ಖಾಸಗಿ ಕೊಳವೆಬಾವಿಗಳು ಹಾಗೂ ಟ್ಯಾಂಕರ್ ಗಳ ಮಾಲೀಕರ ಜತೆ ಮುಂಚಿವಾಗಿಯೇ ಒಪ್ಪಂದ ಮಾಡಿಕೊಳ್ಳಬೇಕು. ಹೀಗೆ ಮಾಡುವ ಮೂಲಕ ಜೂನ್ ಅಂತ್ಯದವರೆಗೆ ನೀರು ಕೊರತೆಯಾಗದಂತೆ ಎಚ್ಚರಿಕೆ ವಹಿಸಬಹುದು. ಇದರಲ್ಲಿ ನಿರ್ಲಕ್ಯ ತೋರುವ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಚುನಾವಣಾ ನೀತಿಸಂಹಿತೆ ಜಾರಿಯಾಗಲಿರುವುದರಿಂದ ಚುನಾವಣಾ ಕೆಲಸದ ಜತೆಗೆ ಬರ ನಿರ್ವಹಣೆಯನ್ನು ನಿರ್ಲಕ್ಷಿಸಬಾರದು. ಬರನಿರ್ವಹಣೆಗೆ ನೀತಿಸಂಹಿತೆಯು ಅಡ್ಡಿಯಾಗುವುದಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.






# ಗಂಡು ಹೆಣ್ಣು ಸರಿ ಸಮಾನತೆ

## ಭಾವರಶ್ಮಿ



– ವೀಣಾ ರಮೇಶ್.

("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಹೆಣ್ಣು.. ಗಂಡು.. ದೇಹಕ್ಕೆ ಎರಡು ಕಣ್ಣುಗಳು ಇದ್ದ ಹಾಗೆ..ಹೆಣ್ಣಿಲ್ಲದೆ ಗಂಡಿಲ್ಲ.. ಗಂಡಿಲ್ಲದೆ ಹೆಣ್ಣಿಲ್ಲ..ಇಬ್ಬರು ಸಮಾನರು..ಹಿಂದೆ ಇದ್ದ ರೀತಿ ಈಗಿಲ್ಲ..ನಾಗರೀಕತೆ ಮುಂದುವರಿದಂತೆ ಹೆಣ್ಣಿಗೂ ಸಮಾನ ಹಕ್ಕುಗಳು ಸಿಗುತ್ತಿರುವುದು ಒಳ್ಳೆಯ ಬೆಳವಣಿಗೆ.

ಹಿಂದಿನ ಕಾಲದಲ್ಲಿ ಅದೇನೋ ಗಂಡು ಮಗು ಇರ್ಬೇಕು..ಅವನೇ ವಂಶ ಬೆಳೆಸುವವನು.. ಹೆಣ್ಣು ಎಂದಿಗೂ ಕುಲಕ್ಕೆ ಹೊರಗೆ ಎಂಬ ನೀತಿಯಿಂದ..ಒಂದು ರೀತಿಯಲ್ಲಿ ಬರೀ ಹೆಣ್ಣು ಮಕ್ಕಳಿದ್ದವರನ್ನು ಹೀಗೆಳೆಯುವ ಕಾಲವಿತ್ತು..ಅಕಸ್ಮಾತ್ ಗ'ಂಡ'ು ಅಗದಿದ್ದರೆ.. ಗಂಡು ಹುಟ್ಟುವ ತನಕ ಸಂತಾನ ಬೆಳೆಸುತ್ತಿದ್ದರು..ಅತ್ತೆ ತಾನೇ ಹೆಣ್ಣು ಆಗಿದ್ದರು..ಗಂಡು ಹೆರದ ಸೊಸೆಯನ್ನು ಹಿಯಾಳಿಸುತ್ತಿದ್ದರು. ಹೀಗಾಗಿಯೇ.. ಮೊದಲೆಲ್ಲ ಮನೆ ತುಂಬಾ ಮಕ್ಕಳು.ಆದರೆ ಈಗ ಈ ರೀತಿ ಇಲ್ಲ..ಮಕ್ಕಳು ಮಕ್ಕಳೇ ..ಹೆಣ್ಣು ಗಂಡು ಎಂಬ ಭೇಧವಿಲ್ಲ..ಏಕೆಂದರೆ ಇಂದು ಮಹಿಳೆ ಯಾವುದರಲ್ಲೂ ಕಮ್ಮಿ ಇಲ್ಲ..ಎಲ್ಲ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿ ಗಂಡಿಗೆ ಸರಿ ಸಮನಾಗಿ.. ಮನೆ ಒಳಗೂ ಮನೆ ಹೊರಗೂ ದುಡಿಯುತ್ತ ಇದ್ದಾರೆ.ಮೊದಲೆಲ್ಲ ಹೆಣ್ಣನ್ನ ಅಬಲೆ ಎಂದು ಬಿಂಬಿಸುತ್ತಿದ್ದರು.ಕಾರಣ.. ಹೊರಗಿನ ಪ್ರಪಂಚದ ಅರಿವು ಬಾರದಂತೆ ಅಡುಗೆಮನೆಗೆ ಸೀಮಿತ ಮಾಡುತ್ತಿದ್ದರು. ಓದಿ ಸಾಧಿಸುವುದು ಏನೆಂದು.. ಗಂಡು ಮಕ್ಕಳಿಗೆ ಮಾತ್ರ ಓದಿಸಿ. ಹೆಣ್ಣನ್ನು ಮನೆ ಕೆಲಸಕ್ಕಷ್ಟೇ ಸೀಮಿತವಾಗಿ ಇದ್ದುದರಿಂದ..ಹೆಣ್ಣು ಅಬಲೆ ಆಗಿದ್ದಳು. ಇದಕ್ಕೆ ಕಾರಣ ಆಗಿದ್ದ ಸಂಪ್ರದಾಯ. ಆದರೆ ಈಗ ಹೆಣ್ಣು ಅಬಲೆ ಇಂದ ಸಬಲೆ ಎನಿಸಿದ್ದಾಳೆ.

ನನ್ನ ಮಟ್ಟಿಗೆ ಗಂಡು ಹೆಣ್ಣು.. ಇಬ್ಬರು ಸಮಾನರು..ಏಕೆಂದರೆ ಬಾಳದೋಣಿಗೆ ಇಬ್ಬರು ನಾವಿಕರು..ಹಾಗಾಗಿ ತಾರತಮ್ಯ ಮಾಡುವುದು ಎಂದೆಂದಿಗೂ ತಪ್ಪು.. ಯಾವ ವಿಷಯವೇ ಆಗಲಿ.ಹೆಣ್ಣು ಗಂಡು ಇಬ್ಬರು ತಪ್ಪು ಮಾಡುತ್ತಾರೆ.. ಕೆಲವು ಮನೆಗಳಲ್ಲಿ ಹೆಣ್ಣಿನ ತಪ್ಪು ಇದ್ದರೆ.. ಕೆಲವು ಮನೆಗಳಲ್ಲಿ ಗಂಡಿನ ತಪ್ಪು ಇರುತ್ತೆ.ಸಂಸಾರ ಒಡೆಯಲು .ಹೆಣ್ಣು. ಗಂಡು ಇಬ್ಬರು ಕಾರಣರಾಗಿರುತ್ತಾರೆ.. ಅದೇ ರೀತಿ ಸಂಸಾರದ ಉನ್ನತಿಗೂ ಇಬ್ಬರೂ ಕಾರಣರು.ಹಾಗಾಗಿ ಒಬ್ಬರ ಮೇಲೆ ಬೊಟ್ಟು ಮಾಡುವುದು ತಪ್ಪು.

ಸಮಾಜದಲ್ಲಿ ಯಾಕೆ..ಕೆಲವರ ಮನೆಯಲ್ಲಿಯೇ..ಲಿಂಗ ತಾರತಮ್ಯ ಮಾಡುವುದು ಕಂಡಿದ್ದೇನೆ..ಹೆಣ್ಣು ಮಕ್ಕಳನ್ನು ಸರ್ಕಾರಿ ಶಾಲೆಗೆ.ಗಂಡು ಮಕ್ಕಳನ್ನು ಕಾನ್ವೆಂಟ್ ಗೆ ಸೇರಿಸುತ್ತಾರೆ.. ಅವರ ಉದ್ದೇಶ..ಗಂಡು ಕಾನ್ವೆಂಟ್ ನಲ್ಲಿ ಇಂಗ್ಲಿಷ್ ಕಲಿತು ಮುಂದೆ ನಮ್ಮನ್ನು ಸಲಹುತ್ತಾನೆ ಎಂಬುದೇ ಆಗಿರುತ್ತದೆ. ಆದರೆ ಇದು ತಪ್ಪು ಸರ್ಕಾರಿ ಶಾಲೆಯಲ್ಲಿ ಓದಿದವರೆ ಹೆಚ್ಚಿನ ಸಾಧನೆ ಮಾಡುತ್ತಾರೆ.. ಇನ್ನು ಕೆಲವರ ಮನೆಯಲ್ಲಿ ಗಂಡು ಮಕ್ಕಳನ್ನು ಏನಿದ್ದರೂ ಹೊರಗಿನ ಕೆಲಸಕ್ಕೆ ಹೆಣ್ಣು ಮಕ್ಕಳನ್ನು ಮನೆಗೆಲಸಕ್ಕೆ ಸೀಮಿತ ಗೊಳಿಸುವುದು ತಪ್ಪು. ಏಕೆಂದರೆ ಇಬ್ಬರು..ಒಳಗೆ ..ಹೊರಗೆ ಸಮಾನ ದುಡಿಯುವುದರಲ್ಲಿ ಯಾವುದೇ ತಪ್ಪಿಲ್ಲ..ಇದೆಲ್ಲ ನಾವೇ ಮಾಡಿಕೊಂಡ ಕಟ್ಟುಪಾಡುಗಳು.

ಈಗ ಮಹಿಳೆ ಗಂಡಿನ ಸಮನಾಗಿ ಹೊರಗೆ ದುಡಿದು ಬಂದರು ಕೆಲವು ಮನೆಗಳಲ್ಲಿ ..ಮನೆಗೆ ಬಂದ ಕೂಡಲೇ ಐದು ನಿಮಿಷ ಸುಧಾರಿಸಿಕೊಂಡರು ಆಡಿಕೊಳ್ಳುತ್ತಾರೆ ಅದೇ ಗಂಡು ಹೊರಗಿನ ಕೆಲಸ ಮುಗಿಸಿ ಬಂದರೆ ಅವನಿಗೆ ಮನೆಯಲ್ಲಿ ರೆಸ್ಟ್.. ಇದು ತಪ್ಪು. ಹಾಗಾಗಿ ದುಡಿಯುವ ಗಂಡಹೆಂಡತಿಯರಲ್ಲಿ ಮೇಲು ಎಂಬ ಭಾವನೆ ಇರಕೂಡದು. ಮನೆಗೆಲಸದಲ್ಲೂ ಪರಸ್ಪರ ಹಂಚಿಕೊಂಡು.ಈ ಕೆಲಸ ನಿನ್ನದೇ.ಆ ಕೆಲಸ ನನ್ನದೇ ಎಂಬುದು ಸಹ ಇರಬಾರದು.ಹಾಗಿದ್ದಲ್ಲಿ ಸಂಸಾರ ಹಾಲು ಜೇನಾಗುತ್ತದೆ.



ಗಂಡೇ ಬೇಕೆಂಬ ಆಸೆಯಲ್ಲಿ ಹೆಣ್ಣು ಬ್ರೂಣ ಹತ್ಯೆ ಮಾಡುವುದು ಮಹಾ ತಪ್ಪು.. ನಮ್ಮ ರಕ್ತ ಹಂಚಿಕೊಂಡು ಹುಟ್ಟಿದ ಮಕ್ಕಳು ಯಾವುದಾದರೇನು..ಇಬ್ಬರನ್ನು ಸಮನಾಗಿ ಸ್ವೀಕರಿಸುವ ಗುಣ ಇರಬೇಕು. ಹೇಳಬೇಕು ಎಂದರೆ.ಇತ್ತೀಚಿಗೆ ಹೆಣ್ಣುಮಕ್ಕಳೇ ಪೋಷಕರನ್ನು ಚೆನ್ನಾಗಿ ನೋಡಿಕೊಳ್ಳುವುದು ಒಂದು ಕಡೆಯಾದರೆ. ಇನ್ನೊಂದು ಕಡೆ ಈ ಹೆಣ್ಣಿನಿಂದಲೇ ಅತ್ತೆ ಮಾವ ವೃದ್ದಾಶ್ರಮ ಸೇರುವುದು ನಡೆದಿದೆ.



ಕೆಲವೊಂದು ಸಂದರ್ಭಗಳಲ್ಲಿ ಗಂಡಿನ ತಪ್ಪು ಇಲ್ಲದಿದ್ದರೂ.ಪಾಪ.ಹೆಂಡತಿಯ ಮಾತಿಗೆ ಬಲಿಪಶು ಆಗುತ್ತಾನೆ..ಆಗ ಅವನನ್ನುದೂಷಿಸುವುದು ತಪ್ಪು. ಇತ್ತೀಚಿಗೆ.. ಹೆಚ್ಚು ಕಲಿತು ಒಳ್ಳೆಯ ಉದ್ಯೋಗದಲ್ಲಿ ಇರುವ ಹೆಣ್ಣು ಮಕ್ಕಳು..ಚಿಕ್ಕ ಚಿಕ್ಕ ವಿಷಯಕ್ಕೆಲ್ಲ ಗಂಡನ ಮನೆಯಲ್ಲಿ ಜಗಳವಾಡಿ ತವರು ಸೇರಿದರು.. ಇದಕ್ಕೆ ಅವರ ಪೋಷಕರು ಕುಮ್ಮಕ್ಕು ನೀಡುವುದು ತಪ್ಪು..ಅದರ ಬದಲಿ ಇಬ್ಬರಲ್ಲಿ ಒಬ್ಬರಾದರು ಸೋತರೆ ಸಂಸಾರ ಸಾಮರಸ್ಯದಿಂದ ಕೂಡಿರುತ್ತದೆ. ಎಲ್ಲ ವಿಷ್ಯಗಳಲ್ಲಿ ಸರಿ ಸಮಾನ ಎಂದು ಸಾಧಿಸುವ ಹೆಣ್ಣು ಮಗಳು ಇಂತಹ ವಿಚಾರದಲ್ಲಿ ಸಾಧಿಸಿದರೆ ಅವಳಿಗೆ ಮುಳ್ಳು. ಗಂಡನ ಮನೆಯಲ್ಲಿ ಯಾವ ಕುಂದು ಇಲ್ಲದಿದ್ದರೂ ಸ್ವಪ್ರತಿಷ್ಠೆಗಾಗಿ ಹಠ ಸಾಧಿಸುವುದು ಹೆಣ್ಣಿನ ತಪ್ಪು.

ಈಗಿನ ದಿನಗಳಲ್ಲ ಇಬ್ಬರು ಸಮಾನರಾದ್ದರಿಂದ..ಪೋಷಕರು ಸಹ ಎಲ್ಲ ಮಕ್ಕಳನ್ನು ಸಮಾನವಾಗಿ ನೋಡಬೇಕು.

ಇಬ್ಬರಿಗೂ.. ಸಮಾನ ವಿದ್ಯಾಭ್ಯಾಸ ನೀಡಿ ಸೊಸೆಯನ್ನು ಮಗಳ ರೀತಿ.. ಹಾಗೆಯೇ ಸೊಸೆಯು ಅತ್ತೆಯನ್ನು ತಾಯಿಯ ರೀತಿ ನೋಡಿದರೆ..ಎಷ್ಟೋ ಸಂಸಾರಗಳು.. ಚೆನ್ನಾಗಿರುತ್ತವೆ. ಗಂಡು ಹೆಣ್ಣಿನಲ್ಲಿ ಯಾವ ಬೇಧ ಭಾವ ತೋರಬಾರದು.ಹೆಣ್ಣು ಗಂಡನ್ನು. ಗಂಡು ಹೆಣ್ಣನ್ನು ಅರ್ಥ ಮಾಡಿಕೊಳ್ಳಬೇಕು.ಪರಸ್ಪರ ನೋವು ನಲಿವು ಹಂಚಿಕೊಂಡು ..ಅವರ ಕಷ್ಟದಲ್ಲಿ ಇವರು..ಇವರ ಕಷ್ಟದಲ್ಲಿ ಅವರು ನೆರವಾದರೆ.. ಯಾವುದೇ...ಜಗಳಗಳು ಮನಸ್ತಾಪ ಆಗುವುದಿಲ್ಲ..ಕೆಲವೊಂದು ಸಂದರ್ಭಗಳಲ್ಲಿ ಹೆಣ್ಣು ಸೋಲಲೇಬೇಕು.. ಹಠ ಸಾಧಿಸಬಾರದು..

# ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ :ಮುರುಘೇಂದ್ರ ಶ್ರೀ

**ಉದಯರಶ್ಮಿ ನ್ಯೂಸ್**



ಆಲಮೇಲ: ಕೇವಲ ಶಿಕ್ಷಣದಿಂದ ಮಾತ್ರ ಸಮಾಜ ಪರಿವರ್ತನೆ ಆಗುವದಿಲ್ಲ. ಶಿಕ್ಷಣದ ಜೊತೆಗೆ ಸಂಸ್ಕಾರವು ಮುಖ್ಯವಾಗಿದೆ ಹಂತ ಸಂಸ್ಕಾರ ಸೀಗಬೇಕು ಎಂದರೆ ಮಠ ಮಂದಿಗಳಲ್ಲಿ ಮಾತ್ರ ಎಂದು ಶಿರಶ್ಯಾಡದ ಅಭಿನವ ಮುರುಘೇಂದ್ರ ಶಿವಾಚಾರ್ಯರು ಹೇಳಿದರು.

ಮಂಗಳವಾರ ಪಟ್ಟಣದ ನಿತ್ಯಾನಂದ ಆರೋಡ ಸಂಗನಬದವೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ನಡೆದ ಸಾಮೂಹಿಕ ವಿವಾಹ ಹಾಗೂ ಧರ್ಮ ಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಠ-ಮಂದಿರಗಳು ಇರುವುದೇ ಸಮಾಜ ದಾರಿ ತಪ್ಪಿದಾಗ ತಿದ್ದುವ ಸಲುವಾಗಿ, ಅದಕ್ಕೆ ಸಮಾಜ ಸುದಾರಣೆ ಆಗಬೇಕು ಎಂದರೆ ಮೊದಲು ಸಂಸ್ಕಾರ ಬೇಕಾಗಿದೆ. ಅಂತಹ ಸಂಸ್ಕಾರ ಮಠ ಮಂದಿರಗಳಲ್ಲಿದೆ. ಅದಕ್ಕೆ ಮಠ ಮಂದಿರಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು. ಆಲಮೇಲದ ನಿತ್ಯಾನಂದ ಆರೋಢ ಮಠದಲ್ಲಿ ಹಲವಾರು ವರ್ಷಗಳಿಂದ ಸಾಮೂಹಿಕ ವಿವಾಹ ಮಾಡಿಕೊಂಡು ಬಂದಿದ್ದು ಇದರಿಂದ ಬಡವರಿಗೆ ಸಾಕಷ್ಟು ಅನಕೂಲವಾಗಿದೆ ಎಂದು ಹೇಳಿದರು.

ರಾಂಪೂರದ ನಿತ್ಯಾನಂದ ಮಹಾರಾಜರು, ಚಿಂಚೋಳಿಯ ಶರಬಸವ ಶರಣರು, ಮಠದ ಪೀಠಾಧಿಕಾರಿ ಬಸವರಲಿಂಗ ಶರಣರು, ಪಂಚಯ್ಯ ರಾಂಪೂರಮಠ, ಚನ್ನಯ್ಯ ಸಾರಂಗಮಠ, ಶಿಕ್ಷಕ ಪಂಡಿತ ಅವಜಿ, ಅಮರೇಶ ಸಾಲಕ್ಕಿ ಮುಂತಾದವರು ಉಪಸ್ಥಿತರಿದ್ದರು.

1ನೇ ಪುಟದಿಂದ

## ದ್ವೇಷ ರಾಜಕಾರಣ ಮುಂದುವರೆದರೆ ಉಗ್ರ ಹೋರಾಟ :ಭೂಸನೂರ

ದಲಿತರಿಗೆ ಸ್ಥಳೀಯ ಶಾಸಕರು ಅನ್ಯಾಯ ಮಾಡುತ್ತಿದ್ದಾರೆ, ಇದನ್ನು ನಾವು ಖಂಡಿಸುತ್ತೇವೆ. ಈಗಿನ ಶಾಸಕರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಸಿಂದಗಿ ಮತ್ತು ಆಲಮೇಲ ಪಟ್ಟಣಕ್ಕೆ ನನ್ನ ಅಧಿಕಾರದ ಅವಧಿಯಲ್ಲಿ ತಂದಿರುವ 7000 ಮನೆಗಳ ದಾಖಲೆ ನನ್ನ ಬಳಿಯಿದೆ. ದಾಖಲೆ ಇಲ್ಲದೇ ನಾನು ಯಾವತ್ತೂ ಮಾತನಾಡುವುದಿಲ್ಲ. ದ್ವೇಷ ರಾಜಕಾರಣ ಹೀಗೆ ಮುಂದುವರೆದರೆ ಉಗ್ರಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಬಿಜೆಪಿ ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಮಾತನಾಡಿ, ತಾಲೂಕಿನ ಹಳೆಯ ಕಾಮಗಾರಿ ಹಾಗೂ ಟೆಂಡರ್ ರದ್ದು ಮಾಡುವ ಪ್ರವೃತ್ತಿ ಶಾಸಕರು ಬೀಡಬೇಕು. ಹಳೆಯ ಫಲಾನುಭವಿಗಳಿಗೆ ಅನ್ಯಾಯ ಮಾಡಿದರೆ ಮುಂದಿನ ದಿನಗಳಲ್ಲಿ ಅಹೋರಾತ್ರಿ ಶಾಸಕರ ಮನೆ ಹಾಗೂ ಕೆಬಿಜೆಎನ್ಎಲ್ ಕಾರ್ಯಾಲಯದ ಮುಂದೆ ಧರಣಿ ಸತ್ಯಾಗ್ರಹ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಂಪೂರ ಪಿಎ ಗ್ರಾಮದ ಆರೂಢ ಮಠದಿಂದ ಪ್ರಾರಂಭವಾದ ಪ್ರತಿಭಟನೆ ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಕೃಷ್ಣಾ ಭಾಗ್ಯ ಜಲ ನಿಗಮದ ಕಾರ್ಯಾಲಯದವರೆಗೆ ಜರುಗಿತು.


ಇದೇ ಸಂದರ್ಭದಲ್ಲಿ ಸಿದ್ದು ಬುಳ್ಳಾ, ಗುರು ತಳವಾರ, ಶ್ರೀಕಾಂತ ಬಿಜಾಪುರ, ಶಂಕರ ಬಗಲಿ ಮಾತನಾಡಿದರು.

ಪ್ರತಿಭಟನೆಯಲ್ಲಿ ರವಿ ನಾಯ್ಕೋಡಿ, ಶಿವನಗೌಡ ಬಿರಾದಾರ, ಪ್ರಶಾಂತ ಕದ್ದರಕಿ, ಸಂತೋಷ ಮಣಗೀರಿ, ಪೀರೂ ಕೆರೂರ, ನಾಗಪ್ಪ ಶಿವೂರ, ಸಿದ್ರಾಮ ಆನಗೊಂಡ, ಮಡಿವಾಳಪ್ಪಗೌಡ ಬಿರಾದಾರ, ಶ್ರೀಶೈಲ ಚಳ್ಳಗಿ, ಮಲ್ಲನಗೌಡ ಬಿರಾದಾರ, ಯಲ್ಲು ಇಂಗಳಗಿ, ಪ್ರಧಾನಿ ಮೂಲಿಮನಿ, ಶಮೀ ಬಿಜಾಪುರ, ವಿಠಲ ಪೂಜಾರಿ, ರಜಾಕ ಮುಜಾವರ, ಖಾಜು ಬಂಕಲಗಿ ಸೇರಿದಂತೆ ರೈತರು, ಬಿಜೆಪಿ ಕಾರ್ಯಕರ್ತರು ಇದ್ದರು.

ಮಕ್ಕಳ ಕವನ ಸಂಕಲನ 'ಸೀಸದ ಕಡ್ಡಿ' ಕೃತಿ ಲೋಕಾರ್ಪಣೆ | ಮಕ್ಕಳ ಸಾಹಿತಿ ಪ.ಗು.ಸಿದ್ದಾಪೂರ ಅಭಿಮತ

# ಭೀಮಾತೀರ ಹಂತಕರ ನಾಡಲ್ಲ, ಚಿಂತಕರ ನಾಡು

**ಉದಯರಶ್ಮಿ ನ್ಯೂಸ್**



ಆಲಮೇಲ: ಮಕ್ಕಳ ಸಾಹಿತ್ಯ ಲೇಖನಗಳು ಬರೆಯಬೇಕೆಂದರೆ ಮಕ್ಕಳ ಮನೋಭಾವದ ಮಟ್ಟಕ್ಕೆ ಇಳಿದು ಬರೆದರೆ ಮಾತ್ರ ಅದು ಮಕ್ಕಳ ಸಾಹಿತ್ಯವಾಗಲಿದೆ ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ ಶಿಕ್ಷಕ ಹಾಗೂ ಮಕ್ಕಳ ಸಾಹಿತಿ ಹ.ಮ. ಪೂಜಾರ ಹೇಳಿದರು.

ಮಂಗಳವಾರ ತಾಲೂಕಿನ ಬಳಗಾನೂರ ಗ್ರಾಮದ ಗುರು ಕೇದಾರಲಿಂಗೇಶ್ವರ ಪ್ರೌಢಶಾಲೆಯಲ್ಲಿ ಬಂಥನಾಳದ ಮಾಧುರಿ ಪ್ರಕಾಶನ ಪ್ರಕಟಿಸಿರುವ ಲೇಖಕ ರಾಚು ಕೊಪ್ಪ ಅವರ ಮಕ್ಕಳ ಕವನ ಸಂಕಲನ 'ಸೀಸದ ಕಡ್ಡಿ' ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು.

ಎಲ್ಲರೂ ಮಕ್ಕಳ ಸಾಹಿತ್ಯ ಲೇಖನಗಳು ಬರೆಯುವದು ಕಷ್ಟದ ಕೆಲಸ. ಯಾರು ಮಕ್ಕಳ ಜೊತೆ ನಿರಂತರ ಒಡನಾಟ ಇರುವುದೊ ಅಂತವರು ಮಾತ್ರ ಮಕ್ಕಳ ಸಾಹಿತ್ಯವನ್ನು ಬರೆಯಬಲ್ಲರು. ಮಕ್ಕಳ ಕುರಿತು ಸಾಹಿತ್ಯವನ್ನು ರಚಿಸಬೇಕು ಎಂದರೆ ಅದು ಜನ್ಮ ಕೊಟ್ಟ ತಾಯಿ ಇನ್ನೊಬ್ಬರು ವಿದ್ಯೆ ಕಲಿಸಿದ ಗುರುವಿನಿಂದ ಮಾತ್ರ. ಇವರಿಬ್ಬರು ಮಕ್ಕಳ ಜೊತೆ ಮಕ್ಕಳಾಗಿ ಮಕ್ಕಳ ಮನೋಬಾವವನ್ನು ಬಲ್ಲವರಾಗಿರುತ್ತಾರೆ ಎಂದರು.

ಮಕ್ಕಳ ಕವನ ಸಂಕಲ 'ಸೀಸದ ಕಡ್ಡಿ' ಕೃತಿಯ ಲೇಖಕ ರಾಚು ಕೊಪ್ಪ ಪ್ರಾಥಮಿಕ ಶಿಕ್ಷಕರಾಗಿರುವದರಿಂದ ಮಕ್ಕಳ ಕವನವನ್ನು ಬರೆಯಲು ಸಾದ್ಯವಾಗಿದೆ. ಪ್ರಾಥಮಿಕ ಹಂತದಿಂದಲೆ ಮಕ್ಕಳು ಪಠ್ಯಪುಸ್ತಕದೊಂದಿಗೆ ಕಥೆ ಕಾದಂಬರಿಗಳು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಮುಳವಾಡದ ಮಕ್ಕಳ ಸಾಹಿತಿ ಪ.ಗು. ಸಿದ್ದಾಪೂರ ಮಾತನಾಡಿ, ವಿಜಯಪುರ ಜಿಲ್ಲೆ ಬರದ ನಾಡಾಗಿದ್ದರೂ ಇದು ಸಾಹಿತ್ಯ ಕ್ಷೇತ್ರದ ಭಾವನಾತ್ಮಕವಾಗಿರುವ ನಾಡು ಇದಾಗಿದೆ. ಜಿಲ್ಲೆಯ ಬೀಮಾ ನದಿ ತೀರ ಅತ್ಯಂತ ಶ್ರೇಷ್ಠವಾದ ಸಂತರ ನಾಡಾಗಿದ್ದು ಅದು ಮಾದ್ಯಮದವರಿಂದ ಭೀಮಾ ತೀರ ಹಂತಕರ ನಾಡಾಗಿ ಬಿಂಬಿಸಲಾಗುತ್ತಿದೆ. ನಿಜವಾಗಲು ಭೀಮಾ ತೀರ ಚಿಂತಕರ ನಾಡಾಗಿದ್ದು, ಅವರ ವಿಚಾರ ಧಾರೆಗಳು ನಾಡಿನಾದ್ಯಂತ ಪಸರಿಸಬೇಕಾಗಿದೆ ಎಂದು ಹೇಳಿದರು.

ಲೇಖಕ ರಾಚು ಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶಿವರಾಜ ಬಿರಾದಾರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಆನಂದ ಭೂಸನೂರ, ಮುಖ್ಯ ಶಿಕ್ಷಕ ಎಂ.ಎಸ್. ಸಾವಳಸಂಗ, ಅವಧೂತ ಬಂಡಗಾರ, ಎಸ್.ಎಚ್. ಬಿರಾದಾರ, ಡಿ.ಕೆ. ಕತ್ನಳ್ಳಿ, ಸಾಧಕ ಮಲ್ಲಿಕಾರ್ಜುನ ಉಪ್ಪಾರ ಮುಂತಾದವರು ಉಪಸ್ಥಿತರಿದ್ದರು.

'ಉದಯರಶ್ಮಿ'
ಓದಿರಿ..

# ಇಂಡಿ: ಶೇ 96 ರಷ್ಟು ಮಕ್ಕಳಿಗೆ ಪೋಲಿಯೋ ಲಸಿಕೆ

**ಉದಯರಶ್ಮಿ ನ್ಯೂಸ್**



ಇಂಡಿ: ಇಲ್ಲಿಯ ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಮ್ಮ ಮಗು ಮಹಮ್ಮದ ಮತ್ತು ಮಗಳಿಗೆ ಪೋಲಿಯೊ ಹನಿ ಹಾಕುವ ಮೂಲಕ ತಾಲೂಕಿನಲ್ಲಿ ಪೊಲಿಯೊ ಲಸಿಕೆ ಅಭಿಯಾನಕ್ಕೆ ಇತ್ತೀಚೆಗೆ ಚಾಲನೆ ನೀಡಿದರು.

5 ವರ್ಷದೊಳಗಿನ 61629 ಕ್ಕೂ ಹೆಚ್ಚು ಮಕ್ಕಳಿಗೆ ಪೊಲಿಯೊ ಹನಿ ಹಾಕುವ ಗುರಿ ಹೊಂದಲಾಗಿದೆ ಸಂಜೆಯ ವರೆಗೆ ಶೇ 96 ರಷ್ಟು 59163 ಮಕ್ಕಳಿಗೆ ಪೋಲಿಯೊ ಹಾಕಲಾಗಿದೆ ಎಂದು ಗದ್ಯಾಳ ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಡಾ॥ ವಿಪುಲ್ ಕೋಳೆಕರ, ವಿಜಯಲಕ್ಷ್ಮಿ ಹಾದಿಮನಿ, ಗುರಸಂಗವ್ವ ಹಿರೇಪಟ್ಟ,ವೀರಕ್ಕಾ ಕೋಳಿ, ರೇಖಾ ಬಿದರಿ, ಬಸವರಾಜ ಧವಳಗಿ ಮತ್ತಿತರಿದ್ದರು.

ತಾಲೂಕಿನಲ್ಲಿ ಇಂಡಿಯ ಸಾರ್ವಜನಿಕ ಕೇಂದ್ರ ಸೇ-ರಿದಂತೆ ತಾಲೂಕಿನ ಎಲ್ಲ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾ.ಪಂ ಕಚೇರಿ, ಶಾಲೆ, ಅಂಗನವಾಡಿ ಕೇಂದ್ರಗಳು, ದೇವಸ್ಥಾನಗಳಲ್ಲಿ ಪೊಲಿಯೊ ಹಾಕಲಾಯಿತು.

ಒಟ್ಟು 264 ಕೇಂದ್ರಗಳಲ್ಲಿ , ಒಟ್ಟು 528 ಸಿಬ್ಬಂದಿ, 53 ಜನ ಸುಪರವಾಯಿಜರ್ ಪಾಲ್ಗೊಂಡಿದ್ದರು.

ಪ್ರತಿ ತಂಡದಲ್ಲಿ ತಲಾ ಇಬ್ಬರು ಪೊಲಿಯೊ ಹನಿ ಹಾಕುವ ಸಿಬ್ಬಂದಿ ಮತ್ತು ತಲಾ ಇಬ್ಬರು ಸಹಾಯಕರು ಇದ್ದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಅಂಗನವಾಡಿ ಕಾರ್ಯಕರ್ತೆಯರ, ಶಿಕ್ಷಣ, ಸಾರಿಗೆ, ಕಂದಾಯ ಮೊದಲಾದ ಸರಕಾರಿ ಇಲಾಖೆಗಳಲ್ಲದೆ , ಲಯನ್ಸ ಸೇರಿದಂತೆ ಅನೇಕ ಸಂಘಟನೆಗಳ ಸಹಯೋಗ ನೀಡಿದರು. ನಗರ ಪ್ರದೇಶದಲ್ಲಿ 4,5 ಮತ್ತು 6 ರಂದು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮಾರ್ಚ 4 ಮತ್ತು 5 ರಂದು ಮನೆ ಮನೆ ತೆರಳಿ 5 ವರ್ಷದೊಳಗಿನ ಮಕ್ಕಳಿಗೆ ಪೊಲಿಯೊ ಹನಿ ಉಳಿದ ಶೇ 5 ರಷ್ಟು ಮಕ್ಕಳಿಗೆ ನೀಡಲಾಗುತ್ತಿದೆ.

# ಕಠಿಣ ಪರಿಶ್ರಮವೇ ಸಾಧನೆಯ ಮಂತ್ರ :ಸಿದ್ದು ಸವದಿ

**ಉದಯರಶ್ಮಿ ನ್ಯೂಸ್**




ಚಿಮ್ಮಡ: ಪ್ರಪಂಚದಲ್ಲಿ ವಿದ್ಯೆ, ಸಾಧನೆ ಲಾಟರಿಯಿಂದ ಪಡೆಯಲಾಗುವುದಿಲ್ಲ, ಯಾವುದೇ ಸಾಧನೆಗೆ ಕಠಿಣ ಪರೀಶ್ರಮವೇ ಮೂಲಮಂತ್ರವೆಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು, ಯಾವುದೇ ಕಲಿಕೆಯ ಹಿಂದೆ ತಂದೆ-ತಾಯಿ, ಶಿಕ್ಷಕರು, ಶಾಲಾ ಸಮೀತಿ ಸೇರಿದಂತೆ ಹಲವಾರು ಜನರ ಪರೀಶ್ರಮ ಇರುತ್ತದೆ, ನಾವು ಉತ್ತಮ ಸಾಧನೆ ಮಾಡುವ ಮೂಲಕ ಅವರಿಗೆ ಗೌರವ ಕೊಡಬೇಕು, ಉತ್ತಮ ಪ್ರಜೆಯಾಗುವ ಮೂಲಕ ದೇಶದ ಋಣವನ್ನು ತೀ-ರಿಸಬೇಕೆಂದರು.

ಸಾನಿಧ್ಯವಹಿಸಿದ ಸ್ಥಳೀಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳ ಕಲಿಕೆಗೆ ಪರೀಶ್ರಮದೊಂದಿಗೆ ಉತ್ತಮ ವಾತಾವರಣವೂ ಅಷ್ಟೇ ಮಹತ್ವದ್ದಾಗಿದೆ, ಅಯೋಗ್ಯರ ಸಂಗ ಮಾಡದೇ, ತಂದೆ, ತಾಯಿ, ಗುರುಗಳ ಮಾರ್ಗದರ್ಶನದಲ್ಲಿ ನಮ್ಮ ಕಲಿಕೆ ಮುಂದುವರೆದಲ್ಲಿ ಸಾಧನೆ ಕಟ್ಟಿಟ್ಟಬುತ್ತಿ ಎಂದರು.


ಸಿಆರ್‌ಪಿ ಸಮನ್ವಯ ಅಧಿಕಾರಿ ದ್ರಾಕ್ಷಾಯಿಣಿ ಮಂಡಿ, ಮುಖ್ಯ ಗುರುಮಾತೆ ಎಂ.ಎಸ್. ಜಿಟ್ಟಿ ಮಾತನಾಡಿದರು.

ಸಮಾರಂಭದ ಸಾನಿಧ್ಯವನ್ನು ಓಂಕಾರ ಯರಗಟ್ಟಿಕರ ವಹಿಸಿದ್ದರು ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಗ್ರಾ.ಪಂ ಮಾಜಿ ಅಧ್ಯಕ್ಷ ಆನಂದ ಕವಟಿ, ಪ್ರಕಾಶ ಪಾಟೀಲ, ಎಪಿಎಂಸಿ ನಿರ್ದೇಶಕ ಪ್ರಭು ಮುಧೋಳ, ಮನೋಜ ಹಟ್ಟಿ, ಬಾಳಪ್ಪ ಗಡೆಪ್ಪನವರ, ನಾಗಪ್ಪ ಆಲಕನೂರ, ಬಾಳೇಶ ಬ್ಯಾಕೋಡ, ಪ್ರಾದ್ಯಾಪಕ ಡಾ;ಎಚ್. ಎಂ. ಕುಂಬಾರ ಇಲಾಹಿ ಜಮಖಂಡಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿದ್ದರು.

ಇದೇ ವೇಳೆ ಕ್ರೀಡಾಕೂಟಗಳಲ್ಲಿ ವಿಜೇತರಾದ ಹಾಗೂ ಹಲವು ಸಾಧಕ ವಿದ್ಯಾರ್ಥಿಗಳನ್ನು ಸತ್ಕರಿಸಿ ಗೌರವಿಸಲಾಯಿತು.

# ಶ್ರೇಷ್ಠ ಯೋಗಿ ಹಜರತ್ ಅಬ್ದುಲ್ ಗಫಾರ್ ಖಾದ್ರಿ

**ಉದಯರಶ್ಮಿ ನ್ಯೂಸ್**



ಕೊಲ್ಹಾರ: "ಏಕ ಸಾಅತ್ ಸ್ವಹಬತೇ ಬಾ ಅವಲಿಯಾ ಬಹತರ ಅಜ್ ಸದ್ ಸಾಲಾ ತಾಅತೆ ಬೇರಿಯಾ" ಸಂದೇಶದಂತೆ ಭೂತ ಮತ್ತು ಭವಿಷ್ಯತ್ ಕಾಲದ ಬಗ್ಗೆ ಒಂದಿಷ್ಟು ಚಿಂತನೆ ಮಾಡದೆ ಮೂಡನಂಬಿಕೆಯನ್ನು ಮನದಲ್ಲಿ ಮೂಡಿಸಿಕೊಳ್ಳದೆ ವರ್ತಮಾನ ಕಾಲದಲ್ಲಿ ತಮ್ಮಿಂದ ಸಾಧ್ಯವಿಲ್ಲ ಎಂಬುದನ್ನು ಅಳಿಸಿ ಹಾಕಿ ಸಾಧ್ಯವಾಗಿಸುವ ಶಕ್ತಿ ಹೊಂದಿರುವ ವ್ಯಕ್ತಿಗಳು ಅಂದರೆ ಶರಣರು ಸಂತರು ದಾರ್ಶನಿಕರು ಹಾಗೂ ಸೂಫಿತತ್ವವನ್ನು ನಂಬಿ ಜೀವನ ನಡೆಸುವವರು ಮನುಜಮತ ವಿಶ್ವಪಥ ಎಂದು ತಿಳಿಸಲು ಸದಾಕಾಲ ಚಿಂತನೆ ಮಾಡುತ್ತಿರುತ್ತಾರೆ.

ಅಂತಹ ಸೂಫಿಗಳಲ್ಲಿ ಒಬ್ಬರು ಅಲಹಾಬಾದ್ ಮೌಲಾನ ಎಂದು ಕಲಿಯುಗದಲ್ಲಿ ಪ್ರಖ್ಯಾತರಾದ ಹಜರತ್ ಅಬ್ದುಲ್ ಗಫಾರ್ ಖಾದ್ರಿ ಶ್ರೇಷ್ಠ ಪವಾಡ ಪುರುಷ ಯೋಗಿಗಳಾಗಿದ್ದರು ಇವರು ಉತ್ತರ ಪ್ರದೇಶದ ಅಲಹಾಬಾದನಲ್ಲಿ ಕ್ರಿ.ಶ 1855 ರಲ್ಲಿ ಜನ್ಮತಾಳಿದರು. ಮಾನವೀಯತೆ ಉದ್ದಾರಕ್ಕಾಗಿ ಸೂಫಿ ಧರ್ಮ ಅದರ ತತ್ವಗಳ ಪ್ರಚಾರಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಹಲವಾರು ರಾಜ್ಯಗಳಲ್ಲಿ ಸುತ್ತಾಡಿ ತಮ್ಮ ಸಾವಿರಾರು ಶಿಷ್ಯ ಬಳಗವನ್ನು ಹುಟ್ಟುಹಾಕಿದರು. ನಿರಂತರವಾಗಿ ಮನುಜ ಕುಲದ ಉದ್ದಾರಕ್ಕಾಗಿ ಆಸೆ ಆಮಿಷಗಳಿಗೆ ಒಳಗಾಗದೇ ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೆ ವಿಶ್ವಕ್ಕೆ ಶಾಂತಿ ಎನ್ನುವ ಸಂದೇಶವನ್ನು ಸಾರುವ ಮೂಲಕ ಹಿಂದೂ ಮುಸ್ಲಿಂ ಕ್ರೈಸ್ತ ಜೈನ ಪಾರ್ಸಿ ಜನಾಂಗದ ಮಾನವರು ಸಮಾಜದಲ್ಲಿ ಬದುಕುವ ಪಾಠವನ್ನು ಸನ್ಮಾರ್ಗದ ಮೂಲಕ ಹೇಳಿ ಕೊಟ್ಟು ಮಾರ್ಗದರ್ಶನ ನೀಡುತ್ತಿದ್ದರು ಅಂತಹ ಸೂಫಿಯವರು 140ನೇ ವಯಸ್ಸಿನಲ್ಲಿ ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಕೋಲಮಂಡಲ ಎಂಬ ಗ್ರಾಮದಲ್ಲಿ ದಿನಂಕ 08-03-1993 ರಲ್ಲಿ ಇಹಲೋಕವನ್ನು ತ್ಯಜಿಸಿದರು ಎಂದು ಅವರ ಆಪ್ತರಾಗಿದ್ದ ಮತ್ತು ಶಿಷ್ಯ ಬಳಗದವರು ಹೇಳುತ್ತಾರೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಗಡಿ ಭಾಗದ ಊರುಗಳಲ್ಲಿ ಹೆಚ್ಚಿನ ಸಮಯ ಮಾನವತಾವಾದಿ ತತ್ವವನ್ನು ಭೋಧಿಸಿದ ಅಲಹಾಬಾದ ಮೌಲಾನಾ 1992ನೇ ಇಸ್ವಿಯಲ್ಲಿ ಮುಳಗಡೆಯಾದ ಕೊಲ್ಹಾರದ ಹಳೇ ಊರಿಗೆ ಆಗಮಿಸಿದಾಗ ಅಲ್ಲಿನ ಭಕ್ತರು ಜಾತಿ ಮತ ಪಂತ ಭೇದ ಭಾವ ಎನ್ನದೇ ಬರಮಾಡಿಕೊಂಡರು. ಆದಯ್ಯ ಶರಣರು ಹೇಳಿದಂತೆ ಸೂಫಿಗಳು ತನುವಿನಲ್ಲಿ ನಿರ್ಮೋಹಿಗಳಾಗಿ ಮನದಲ್ಲಿ ನಿರಂಹಕಾರಿಗಳಾಗಿ ಪ್ರಾಣದಲ್ಲಿ ನಿರ್ಭಯರಾಗಿ ಚಿತ್ತದಲ್ಲಿ ನಿರಪೇಕ್ಷೀಗಳಾಗಿ ವಿಷಯುಗಳಲ್ಲಿ ಉದಾಸೀನ ರಾಗಿ ಭಾವದಲ್ಲಿ ದಿಗಂಬರ ರಾಗಿ ಜ್ಞಾನದಲ್ಲಿ ಪರಮಾನಂದ ಭರಿತರಾಗಿ ಮನದ ವಿಕಾರಗಳನ್ನೆಲ್ಲ ಜಯಿಸಿ ಫಕೀರರಾಗಿ ದೇಶ ಸಂಚಾರ ಕೈಗೊಳ್ಳುವ ಮಹಾನ್ ಸಂತರು ಅಂತಹ ಸೂಫಿ ಪರಂಪರೆಯಲ್ಲಿ ಇಪ್ಪತ್ತನೇ ಶತಮಾನದ ಸೂಪಿಸಂತರಾದ ಹಜರತ್ ಶಾಹ್ ಮೊಹಮ್ಮದ್ ಅಬ್ದುಲ್ ಗಫಾರ್ ಖಾದ್ರಿಯವರ ಕೊಡುಗೆ ಅಪಾರ.

ಅಂತಹ ಶ್ರೇಷ್ಠ ಪವಾಡ ಪುರುಷನ ಶಿಷ್ಯ ಬಳಗದಲ್ಲಿ ಒಬ್ಬರಾದ ಕೊಲ್ಹಾರ ಪಟ್ಟಣದ ಡಾಕ್ಟರ್ ಅಲಹಾಜ್ ಶಾಹ್ ಬಕ್ತೀಯಾರಖಾನ ಖಾದ್ರಿ ಸಾಹೇಬರು ಅವರ ಉತ್ತರಾಧಿಕಾರಿಯಾಗಿ ಕಳೆದ ಮೂವತ್ತು ವರ್ಷಗಳಿಂದ ಅಖಂಡ ವಿಜಯಪೂರ ಜಿಲ್ಲೆಯ ಭಾಗದಲ್ಲಿ ಸಂಚರಿಸುವ ಮೂಲಕ ಶಿಷ್ಯರಿಗೆ ಹಾಗೂ ಭಕ್ತರಿಗೆ ಅವರ ಸಂದೇಶವನ್ನು ಸಾರುವ ಸಲುವಾಗಿ ತಮ್ಮ ಗುರುಗಳ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಸರ್ವಧರ್ಮದ ಸಮ್ಮೇಳನ ರೂಪದಲ್ಲಿ ನಾಡಿನಲ್ಲಿರುವ ಎಲ್ಲ ಧರ್ಮದ ಮಠಾಧೀಶರನ್ನು ಕರೆಯಿಸಿ ಬಹಳ ಅರ್ಥಪೂರ್ಣವಾಗಿ ಭಾವೈಕ್ಯದ ಸಂದೇಶವನ್ನು ಸಾರುವ ಕಾಯಕದಲ್ಲಿ ತೊಡಗಿಕೊಂಡು ವಿವಿಧತೆಯಲ್ಲಿ ಏಕತೆಯ ಸಂಕೇತ ಅಡಗಿರುತ್ತದೆ ಎಂದು ತಿಳಿಸಲು ಶ್ರಮಿಸುತ್ತಿದ್ದಾರೆ. ಅಲ್ಲದೇ ಪ್ರತಿವರ್ಷ ತಮ್ಮ ಗುರುಗಳ ಹೆಸರಿನಲ್ಲಿ ಅಲಹಾಬಾದ ಮೌಲಾನಾ ಪ್ರತಿಷ್ಟಿತ ಸದ್ಭಾವಣಾ ಪ್ರಶಸ್ತಿಯನ್ನು ಸಮಾಜದ ಮಾನವತಾವಾದಿ ಆದ್ಯಾತ್ಮಿಕ ಜೀವಿ ಡಾಕ್ಟರ್ ಅಲಹಾಜ್ ಶಾಹ್ ಬಕ್ತೀಯಾರಖಾನ ಖಾದ್ರಿಯವರು ಕವಿ ಸಾಹಿತಿಗಳಿಗೆ ಸಮಾಜಮುಖಿ ಕಾರ್ಯ ಮಾಡಿದವರಿಗೆ ನೀಡಿ ಗೌರವಿಸಿ ನಿಜವಾದ ಅರ್ಥದಲ್ಲಿ ತಮ್ಮ ಗುರುಗಳ ಪಾದಕ್ಕೆ ಭಾವಪೂರ್ಣ ಶೃದ್ದಾಂಜಲಿಯ ಪುಷ್ಪಗಳನ್ನು ಅರ್ಪಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ.

# ಪ್ರೊ.ಸಿದ್ದು ಸಾವಳಸಂಗರಿಗೆ ಪ್ರಶಸ್ತಿ ಪ್ರದಾನ

**ಉದಯರಶ್ಮಿ ನ್ಯೂಸ್**



ವಿಜಯಪುರ: ಚೇತನ ಪೌಂಡೇಶನ್, ಕರ್ನಾಟಕ ವತಿಯಿಂದ ಇದೇ ರವಿವಾರ 03 ಮಾರ್ಚ್ 2024 ರಂದು ಧಾರವಾಡದ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಸಂಗೀತ ಸಾಮ್ರಾಟ ಗಾನವಿಶಾರದ ಡಾ. ಪಂಡಿತ ಪುಟ್ಟರಾಜ ಕವಿಗವಾಯಿಗಳ 110 ನೇ ಜಂಯಂತ್ಯೋತ್ಸವದ ಪ್ರಯುಕ್ತ ಏರ್ಪಡಿಸಿದ ಸಂಗೀತ ಸೌರಭ ಕಾರ್ಯಕ್ರಮದಲ್ಲಿ ವಿಜಯಪುರದ ಬಾಲಿಕೆಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ಕನ್ನಡ ಉಪನ್ಯಾಸಕ ಪ್ರೊ. ಸಿದ್ದು ಸಾವಳಸಂಗ ಅವರಿಗೆ ಶಿಕ್ಷಣ ಮತ್ತು ಸಾಹಿತ್ಯದಲ್ಲಿ ಮಾಡಿದ ಉತ್ತಮ ಸೇವೆಯನ್ನು ಪರಿಗಣಿಸಿ "ಪದ್ಮಭೂಷಣ ಪುಟ್ಟರಾಜ ಕವಿಗವಾಯಿ ರಾಷ್ಟೀಯ ಪ್ರಶಸ್ತಿ" ಪ್ರದಾನ ಮಾಡಲಾಯಿತು.

ಚೇತನ ಪೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ, ಸಂಗೀತ ಸೌರಭ ಕಾರ್ಯಕ್ರಮದ ಅಧ್ಯಕ್ಷ ನೀ ಶ್ರೀಶೈಲ, ಹಿರಿಯ ಕವಿಗಳು ಹಾಗೂ ನೂರಾರು ಜನ ಪ್ರೇಕ್ಷಕರ ನಡುವೆ ಪ್ರೊ. ಸಿದ್ದು ಸಾವಳಸಂಗ ಅವರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR